ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ   ದರ್ಶನ   ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫   ಜೂನ್ - ೨೦೧೫   ಸಂಚಿಕೆ - ೧೧

ಪಂಚಾಯತ್ ಚುನಾವಣೆ ಮುಗಿಯಿತು, ಮುಂದಿನ ಸ್ಥಿತಿ-ಗತಿಯೇನು?

ಇಬ್ಬರು ಯುವಕರ ಗಾಂಧಿ ಕುರಿತ ಚಿಂತನೆಗಳು

ಭಾರತೀಯ ರಾಜನೀತಿಯಲ್ಲಿ ಸಾಮಾಜಿಕ ಸೌಖ್ಯಸೂತ್ರ

ಅಂಬೇಡ್ಕರ್ ಮತ್ತು ಗಾಂಧಿ

ಜನಪದ ವಿಚಾರದಲ್ಲಿ

ಜೂನ್ -೨೦೧೫

ಪಂಚಾಯತ್ ಚುನಾವಣೆ ಮುಗಿಯಿತು. ಆಯ್ಕೆಯಾಗಿರುವ ಸದಸ್ಯರಲ್ಲಿ ಯಾವುದೇ ಪ್ರಚಲಿತ ಸಮಸ್ಯೆಗಳ ಬಗ್ಗೆ ಕಾಳಜಿ ಕಡಿಮೆ ಇರುವಂತಿದೆ. ಇಂಥ ಸಂದರ್ಭದಲ್ಲಿ ಜನತೆಯ ಮುಂದಿನ ಸ್ಥಿತಿ - ಗತಿ ಏನು ಎಂಬ ಬಗ್ಗೆ ಹಲವು ಚಿಂತನೆ ಈ ಲೇಖನದಲ್ಲಿದೆ.

ಪ್ರಚಲಿತ ರಾಜನೀತಿಯಲ್ಲಿ ಸಾಮಾಜಿಕ ಅಸೌಖ್ಯ ಹೆಚ್ಚಾಗುತ್ತಿರುವಾಗ ಭಾರತೀಯ ರಾಜನೀತಿಯಲ್ಲಿ ಸಾಮಾಜಿಕ ಸೌಖ್ಯ ಸೂತ್ರ ಹೇಗಿತ್ತೆಂಬುದರ ಬಗ್ಗೆ ತಿಳಿಯಬೇಕಾದಲ್ಲಿ ಈ ಲೇಖನ ಓದಿ.

ಬ್ಯಾಂಕುಗಳು ರೈತರಿಗೆ ಕೊಡಮಾಡುವ ಸಾಲ ಅವರಿಗೆ ನೆಮ್ಮದಿ ತರುವ ಬದಲು ಆತ್ಮಹತ್ಯೆಗೆ ಹೇಗೆ ಕಾರಣವಾಗುತ್ತದೆಂಬುದರ ಚಿತ್ರಣ ಈ ಲೇಖನದಲ್ಲಿದೆ.

ಗಾಂಧೀಜಿಯವರ ವ್ಯಕ್ತಿತ್ವದ ಬಗ್ಗೆ ಡಾ.ಅಂಬೇಡ್ಕರರು ವ್ಯಕ್ತಪಡಿಸಿರುವ ಕೆಲ ಅಸಂತೋಷದ ಮಾತುಗಳಿಗೆ ಸಮಾಧಾನ ಹೇಳುವ ಪ್ರಯತ್ನ ಇಲ್ಲಿದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್ - ೨೦೧೫
ಸಂಪುಟ - ೧೫
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-


ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.net

ಏಳು ರೈತ ಬಾಂಧವ

ಏಳು ರೈತ ಬಾಂಧವ
ಸೀಳು ದಾಸ್ಯ ಪಾಶವ
ಕೀಳು ದಾಸ್ಯ ಮೂಲವ
ನೀನಾಳು ನಿನ್ನ ರಾಜ್ಯವಾ

ಮರೆಯೋ ಜಾತಿ-ಪಾತಿಯಾ
ಮೆರೆಸೋ ಧರ್ಮ ನೀತಿಯಾ
ಧರಿಸು ಶುದ್ಧ ಖಾದಿಯಾ
ನೀನಾಳು ನಿನ್ನ ರಾಜ್ಯವಾ



ಕಡಿದು ಭೇದಭಾವವ
ತೊಡೆದು ದುಷ್ಟ ವ್ಯಸನವ
ಹಿಡಿದು ಸಾಮ್ಯ ಯೋಗವ
ನೀನಾಳು ನಿನ್ನ ರಾಜ್ಯವಾ

ಇಲ್ಲದಿದ್ದ ಜನರಿಗೆ
ಉಳ್ಳ ಜನರು ನೀಡುತ
ಎಲ್ಲ ಜನರು ಸುಖಿಸಲು
ನೀನಾಳು ನಿನ್ನ ರಾಜ್ಯವಾ

ಹೀನನೆಂದು ಅಳದಿರು
ದೀನನೆಂದು ಅಳದಿರು
ನೀನೆ ಅನ್ನದಾತನು
ನೀನಾಳು ನಿನ್ನ ರಾಜ್ಯವಾ


ಗ್ರಾಮರಾಜ್ಯಯಜ್ಞದಿಂ
ಪ್ರೇಮ ಶ್ರಮದ ದಾನದಿಂ
ಗ್ರಾಮದುದಯವಾಗಲು
ನೀನಾಳು ನಿನ್ನ ರಾಜ್ಯವಾ

ಶಾಂತಿ ಕ್ರಾಂತಿ ಮಂತ್ರವು
ಗಾಂಧಿಯವರ ತಂತ್ರವು
ಸಂತ ನುಡಿಯ ಸಾರವು
ನೀನಾಳು ನಿನ್ನ ರಾಜ್ಯವಾ

- ಸರ್ವೋದಯ ಗೀತೆ

ಚಿಂತನೆಗೊಂದು ಸಂಗತಿ

ಜನಪ್ರಿಯ ಕನ್ನಡ ದಿನಪತ್ರಿಕೆಯೊಂದರಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿರುವ ಯಾತ್ರಾಸ್ಥಳವಾದ ಗೋಕರ್ಣದ ಬಗ್ಗೆ ಲೇಖನ ಒಂದು ಪ್ರಕಟವಾಗಿದೆ. ಆಧುನಿಕತೆಯ ಗಾಳಿಯಿಂದಾಗಿ ಗೋಕರ್ಣ ಹೇಗೆ ತನ್ನ ಧಾರ್ಮಿಕ ಮತ್ತು ನೈಸರ್ಗಿಕ ತನ್ನ ತನವನ್ನು ಕಳೆದುಕೊಳ್ಳುತ್ತಿದೆ ಎಂಬುದನ್ನು ತಿಳಿಸಿದೆ. ಸ್ಥಳದ ವೈಶಿಷ್ಟ್ಯದ ಮಾಯವಾಗುವಿಕೆಯ ಜೊತೆಗೆ ಆ ಸ್ಥಳದ ಪರಿಸರ ಎಷ್ಟು ಮಲಿನಗೊಂಡಿದೆಯೆಂಬುದನ್ನು ಕೂಡ ತಿಳಿಸುತ್ತದೆ. ಗೋವಾ ಕಡೆಯಿಂದ ಬರುವ ವಿದೇಶೀ ಹಿಪ್ಪಿಗಳ ಕಾರಣದಿಂದಾಗಿ ದೇಶೀಯ ಸಂಸ್ಕೃತಿ ತನ್ನ ಸೊಗಡನ್ನು ಹೇಗೆ ಕ್ರಮೇಣ ಕಳೆದುಕೊಳ್ಳುತ್ತಿದೆ ಎಂಬುದಕ್ಕೆ ಗೋಕರ್ಣ ಸಾಕ್ಷಿಯಾಗಿದೆ. ದೈವತ್ವದ ಭಾವನೆ ಮತ್ತು ಆಧ್ಯಾತ್ಮಿಕ ಚಿಂತನೆ ಮತ್ತು ವೇದಾಭ್ಯಾಸಗಳ ತಾಣವಾಗಿದ್ದ ಊರು ಈಗ ಹೇಗೆ ಹಣದ ಹಿಂದೆ ಬಿದ್ದಿದೆ ಎಂಬುದನ್ನು ತಿಳಿದು ಯಾರ ಮನಸ್ಸಿಗಾದರೂ ನೋವಾಗುತ್ತದೆ. ಇದು ಕೇವಲ ಗೋಕರ್ಣದಂಥಹ ಊರಿನ ಸ್ಥಿತಿಯಲ್ಲ ಕರ್ನಾಟಕದಲ್ಲಿರುವ ಇತರ ಯಾತ್ರಾ ಸ್ಥಳಗಳ ಸ್ಥಿತಿಯು ಇದೇ ಆಗಿದೆ. ಇದಕ್ಕೆ ಮುಖ್ಯ ಕಾರಣ ಸ್ಥಳೀಯ ಜನರಲ್ಲಿ ತಮ್ಮ ಊರಿನ ಇತಿಹಾಸ, ಪರಂಪರೆ ಮತ್ತು ವೈಶಿಷ್ಟ್ಯತೆಗಳ ಪರಿಚಯ ಇಲ್ಲದೇ ಇರುವುದು. ಯಾವಾಗ ಸ್ಥಳೀಯ ಜನರಿಗೆ ಈ ಬಗ್ಗೆ ಅಜ್ಞಾನವಿರುತ್ತದೊ ಆಗ ಅವರಿಗೆ ತಮ್ಮ ಊರಿನ ಬಗ್ಗೆ ಕಿಂಚಿತ್ತೂ ಅಭಿಮಾನವಿರುವುದಿಲ್ಲ. ತಮ್ಮದನ್ನು ಉಳಿಸಿಕೊಳ್ಳಬೇಕೆಂಬ ವಿಚಾರವು ಅವರ ಮನಸ್ಸಿನಲ್ಲಿ ಹುಟ್ಟುವುದಿಲ್ಲ. ಅಂಥ ಊರಿನಲ್ಲಿರುವ ವ್ಯಾಪಾರಸ್ಥರು ಮತ್ತು ಧರ್ಮಶಾಲೆಯವರು ಮತ್ತು ಲಾಡ್ಜಿಂಗ್ - ಬೋರ್ಡಿಂಗ್‌ರವರು ತಮ್ಮ ವ್ಯಾಪಾರ ವ್ಯವಹಾರಗಳ ಅಭಿವೃದ್ಧಿಯ ಬಗೆಗೆ ಯೋಚನೆಮಾಡುತ್ತಾರೆಯೇ ವಿನಃ ತಮ್ಮೂರಿನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬರುವ ಬಗ್ಗೆ ಯೋಚಿಸುವುದಿಲ್ಲ. ಇನ್ನು ಸರ್ಕಾರಕ್ಕಾದರೂ ಅದರದೇ ಆದ ದಿನನಿತ್ಯದ ಆಡಳಿತದ ಸಮಸ್ಯೆಗಳಿರುವಾಗ ಗೋಕರ್ಣದಂಥಹ ನೂರಾರು ಯಾತ್ರಾ ಸ್ಥಳಗಳ ವಿಶಿಷ್ಟತೆಯನ್ನು ಕಾಪಾಡಲು ಸಮಯವೆಲ್ಲಿದೆ? ಶಿಕ್ಷಣ ಇಲಾಖೆ ಈ ಬಗ್ಗೆ ದಿವ್ಯ ಉದಾಸೀನತೆ ಹೊಂದಿದೆ. ತಾನು ನಡೆಸುವ ಶಾಲಾ ಕಾಲೇಜುಗಳಲ್ಲಿ ಸ್ಥಳದ ವಿಶಿಷ್ಟತೆ ತಿಳಿಸುವ ಪ್ರಯತ್ನ ಮಾಡುವುದಿಲ್ಲ. ಅದನ್ನು ಉಳಿಸಬೇಕೆಂಬ ತಿಳುವಳಿಕೆಯನ್ನು ವಿದ್ಯಾರ್ಥಿಗಳಿಗೆ ಕೊಡುವುದಿಲ್ಲ. ದೂರದಲ್ಲಿ ಏನಾಗುತ್ತಿದೆ ಎಂಬುದು ವಿದ್ಯಾರ್ಥಿಗಳಿಗೆ ಗೊತ್ತಿರುತ್ತದೆ. ಆದರೆ ತಮ್ಮ ಊರಲ್ಲಿ ಏನಾಗುತ್ತಿದೆ ಎಂಬುದು ಗೊತ್ತಿರುವುದಿಲ್ಲ. ಇಂಥ ವೈರುಧ್ಯಗಳ ಮಧ್ಯೆ ಇರುವ ದೇಶದ ಐತಿಹಾಸಿಕ, ಧಾರ್ಮಿಕ, ಪ್ರಾಕೃತಿಕ ಮತ್ತು ಕಲಾತ್ಮಕ ಸ್ಥಳಗಳನ್ನು ಉಳಿಸುವ ಬಗೆ ಹೇಗೆ ಎಂಬುದನ್ನು ಎಲ್ಲರೂ ಗಂಭೀರವಾಗಿ ಆಲೋಚಿಸಬೇಕು.



ಪಂಚಾಯತ್ ಚುನಾವಣೆ ಮುಗಿಯಿತು, ಮುಂದಿನ ಸ್ಥಿತಿ-ಗತಿಯೇನು?

– ಸುರೇಂದ್ರ ಕೌಲಗಿ

(ಒಳ್ಳೆಯ ಸರ್ಕಾರ ಸ್ವ-ರಾಜ್ಯಕ್ಕೆ ಪರ್ಯಾಯವಾಗಲಾರದು

– ಮಹಾತ್ಮ ಗಾಂಧಿ – ೧೯೨೧)

ರಮೇಶ್‌ಕುಮಾರ್ ಅಧ್ಯಕ್ಷತೆಯ ಪಂಚಾಯತ್ ಪುನರ್‌ರಚನೆಯ ವರದಿಯ ಪ್ರಕಾರ ರಾಜ್ಯದಲ್ಲಿ ಗ್ರಾಮ ಪಂಚಾಯತ್ ಸಂಸ್ಥೆಗಳಿಗೆ ಮೊದಲ ಹಂತದ ಸಾರ್ವತ್ರಿಕ ಚುನಾವಣೆ ಮುಗಿದಿದೆ; ಎರಡನೇ ಹಂತದ ಚುನಾವಣೆ ಇಷ್ಟರಲ್ಲಿಯೇ ಮುಗಿಯಲಿದೆ. ಒಟ್ಟಾರೆ ೨೦೧೫ರಿಂದ ಮುಂದಿನ ೫ವರ್ಷಗಳವರೆಗೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವಿಜೃಂಭಿಸಲಿದೆ.

ಈ ವರೆಗಿದ್ದ ಗ್ರಾಮ ಪಂಚಾಯಿತಿಗಳ ಆಡಳಿತ ವೈಖರಿ, ಮಹಾತ್ಮ ಗಾಂಧಿ ಉದ್ಯೋಗ ಭರವಸೆ ಯೋಜನೆಯ ಅನುಷ್ಠಾನದಲ್ಲಿ ಆಗಿರುವ ಅವ್ಯವಹಾರ, ಗ್ರಾಮ ಸಭೆಗಳ ಬಗ್ಗೆ ನಿರಾಸಕ್ತಿ, ಆಡಳಿತಾಧಿಕಾರಿಯ ಜೊತೆ ಪ್ರಬಲ ಸದಸ್ಯರ ಒಂದುಗೂಡುವಿಕೆಯಿಂದಾಗಿ ಪಂಚಾಯತ್ ಕಾಮಗಾರಿಗಳಲ್ಲಿ ಉಂಟಾಗುತ್ತಿದ್ದ ವ್ಯತ್ಯಾಸ ಮುಂತಾದವುಗಳನ್ನು ಅನುಭವಿಸಿದ ಗ್ರಾಮಸ್ಥರು ಹೊಸ ಗ್ರಾಮಪಂಚಾಯಿತಿಗಳಿಂದಲಾದರೂ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವುದೆಂದು ನಿರೀಕ್ಷಿಸಿದ್ದಾರೆ. ಆದರೆ ಪ್ರಸ್ತುತ ಪಂಚಾಯಿತಿ ಚುನಾವಣೆಯಲ್ಲಿ ಅದೇ ಹಣದ ಪ್ರಾಬಲ್ಯ, ಕುಟಿಲತೆಯ ಸರ್ವಾನುಮತದ ಸದಸ್ಯರ ಆಯ್ಕೆ. ರಾಜಕೀಯ ಪಕ್ಷಗಳ ಸೂತ್ರದ ಗೊಂಬೆಯಾಟ, ಅಧಿಕಾರಶಾಹಿಯ ಹಿಡಿತ, ಮುಂತಾದವುಗಳನ್ನು ಗಮನಿಸಿದಾಗ "ಪಂಚಾಯತ್ ಚುನಾವಣೆ ಮುಗಿಯಿತು, ಮುಂದೇನು ಗತಿ?" ಎಂಬ ಭಯಪೀಡಿತ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಪ್ರಜಾಪ್ರಭುತ್ವದ ಮೊದಲ ಹಂತವಾದ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ನಡೆದ ಚುನಾವಣೆ ನಮ್ಮ ಪ್ರಜಾಪ್ರಭುತ್ವ ಯಾವ ದಿಕ್ಕಿಗೆ ಹೋಗುತ್ತಿದೆ ಎಂಬುದನ್ನು ಸೂಚಿಸುತ್ತದೆ. ದೇಶದ ವಿವಿಧ ರಾಜ್ಯಗಳಲ್ಲಿಯೂ ಪಂಚಾಯಿತಿಗಳಿಗೆ ಚುನಾವಣೆ ನಡೆದಿದೆ ಮತ್ತು ಕೆಲವು ರಾಜ್ಯಗಳಲ್ಲಿ ನಡೆಯಲಿದೆ. ಪಂಚಾಯತ್ ರಾಜ್ಯದ ಚಿಂತನೆ ಗಾಂಧೀಜಿಯವರ ಕಾಲದಿಂದ ನಡೆದುಕೊಂಡು ಬಂದಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಸಹ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆಸಿ ಅದರ ಸಾಧಕ ಬಾಧಕಗಳನ್ನು ದೇಶದ ಮುಂದೆ ಇಟ್ಟಿದ್ದಾರೆ. ಸಂವಿಧಾನ ರಚನಾ ಸಭೆಯಲ್ಲಿಯಾ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ. ಸ್ವಾತಂತ್ರ್ಯಾನಂತರ ಅದು ತೀವ್ರತೆಯನ್ನು ಪಡೆಯಿತು. ಸ್ವತಂತ್ರ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಯಾವ ರೀತಿ ಇರಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಲು ಅನೇಕ ಸಮಿತಿಗಳನ್ನು ರಚಿಸಲಾಗಿತ್ತು. ಅಶೋಕ ಮೆಹ್ತಾ ಸಮಿತಿ, ಗಾಡ್ಗೀಲ್ ಸಮಿತಿ ಮತ್ತು ಬಲವಂತರಾಯ್ ಮೆಹ್ತಾ ಸಮಿತಿ ಮುಖ್ಯವಾದವು. ಮೊಟ್ಟ ಮೊದಲ ಬಾರಿಗೆ ಗುಜರಾತ್‌ನಲ್ಲಿ ಪ್ರಾರಂಭವಾದ ಪಂಚಾಯತ್ ರಾಜ್ಯ ವ್ಯವಸ್ಥೆಯು ಕ್ರಮೇಣ ಇಡೀ ದೇಶವನ್ನು ವ್ಯಾಪಿಸಿತು. ಈಗ ದೇಶದ ಎಲ್ಲ ರಾಜ್ಯಗಳಲ್ಲಿ ಪಂಚಾಯತ್ ರಾಜ್ಯ ತಳವೂರಿದೆ. ಪಂಚಾಯುತ್ ರಾಜ್ಯದ ಮೂಲಕ ಅಧಿಕಾರದ ವಿಕೇಂದ್ರೀಕರಣವಾಯಿತು. ಅದರ ಪರಿಣಾಮವಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ರಚನೆಯಾಯಿತು. ಇವು ದೇಶದ ಶಾಸನ ರಚನೆಯ ಸಂಸ್ಥೆಗಳಾದ ವಿಧಾನ ಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆಗಳ ತೀರ್ಮಾನಗಳ ಅನುಷ್ಠಾನವನ್ನು ಜಾರಿಗೆ ತರುವ ಕೆಲಸವನ್ನು ಮುಖ್ಯವಾಗಿ ಅಭಿವೃದ್ಧಿಯ ಕೆಲಸವನ್ನು ಸರ್ಕಾರದ ಏಜೆಂಟ್ ರೂಪದಲ್ಲಿ ಕೆಲಸಮಾಡುತ್ತ ಬಂದಿವೆ. ಸಂವಿಧಾನದ ಆಶಯದ ಪ್ರಕಾರವೆ ಮತ್ತು ಶಾಸನಬದ್ಧವಾಗಿಯೆ ಪಂಚಾಯತ್ ರಾಜ್ ಸಂಸ್ಥೆಗಳ ರಚನೆಯಾಗಿದ್ದರೂ ಕೂಡ ಅವು ಸ್ವತಂತ್ರವಾಗಿ ಸ್ಥಳೀಯ ಜನರ ಆಶೋತ್ತರಗಳನ್ನು ಗಮನದಲ್ಲಿರಿಸಿಕೊಂಡು ಸ್ವಾಯತ್ತತೆಯ ಆಧಾರದ ಮೇಲೆ ಯಾವ ತೀರ್ಮಾನವನ್ನೂ ಕೈಗೊಳ್ಳುವ ಅಧಿಕಾರ ಅವುಗಳಿಗಿಲ್ಲ, ಉದಾಹರಣೆಗೆ ತಮ್ಮ ಗ್ರಾಮದ ಅಗತ್ಯಗಳಿಗನುಗುಣವಾಗಿ ಗ್ರಾಮದ ಮಕ್ಕಳಿಗೆ ಮತ್ತು ಯುವಕರಿಗೆ ಶಿಕ್ಷಣವನ್ನು ಕೊಡುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗಾಗಲಿ ಮತ್ತು ಇತರ ಪಂಚಾಯತ್ ಸಂಸ್ಥೆಗಳಿಗಾಗಲಿ ಇಲ್ಲ; ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಲ್ಲಿ ಮದ್ಯದ ಮಾರಾಟವನ್ನು ನಿಲ್ಲಿಸುವ ಅಧಿಕಾರ ಪಂಚಾಯಿತಿಗಳಿಗಿಲ್ಲ; ಆಯಾ ಪ್ರದೇಶದಲ್ಲಿಯ ಸಂಪನ್ಮೂಲಗಳನ್ನು ಉಪಯೋಗಿಸಿ ಜನರ ಅವಶ್ಯಕತೆಗಳನ್ನು ಪೂರೈಸಬಲ್ಲ ವಸ್ತುಗಳನ್ನು ತಯಾರಿಸುವ ಉದ್ಯೋಗಗಳನ್ನು ಸ್ಥಾಪಿಸುವ ಅಧಿಕಾರ ಪಂಚಾಯತ್ ರಾಜ್ಯ ಸಂಸ್ಥೆಗಳಿಗಿಲ್ಲ; ಸ್ಥಳೀಯ ಜಮೀನು, ನೀರು ಮತ್ತು ಅರಣ್ಯಗಳ

ಮೇಲೆ ಪಂಚಾಯಿತಿಗಳಿಗೆ ಅಧಿಕಾರವಿಲ್ಲ; ಗ್ರಾಮದಲ್ಲಿಯ ವಿವಾದಗಳನ್ನು ಗ್ರಾಮದಲ್ಲಿಯೇ ಇತ್ಯರ್ಥಪಡಿಸಿಕೊಳ್ಳುವ ವ್ಯವಸ್ಥೆ ಇನ್ನೂ ಆಗಿಲ್ಲ.

ಗ್ರಾಮಗಳಲ್ಲಿ ಬಹಳಷ್ಟು ಪ್ರಾಕೃತಿಕ ಮತ್ತು ದೈಹಿಕ ಮತ್ತು ಬೌಧಿಕ ಸಂಪನ್ಮೂಲಗಳಿದ್ದರೂ ಕೂಡ ಅವುಗಳ ಸರಿಯಾದ ಬಳಕೆ ಮಾಡಿಕೊಂಡು ಗ್ರಾಮಗಳು ತಮ್ಮ ಜೀವನದ ಅಗತ್ಯ ಪದಾರ್ಥಗಳಲ್ಲಿ ಸ್ವಾವಲಂಬಿತವಾಗಿಲ್ಲ. ಎಲ್ಲ ಅಗತ್ಯಗಳ ವಿಷಯದಲ್ಲಿ ಪರಾವಲಂಬಿತವಾಗುವ ಸ್ಥಿತಿಯಲ್ಲಿಯೇ ಅವುಗಳನ್ನು ಇರಿಸಲಾಗಿದೆ. ದೇಶದಲ್ಲಿ ಪಂಚಾಯತ್ ರಾಜ್ಯದ ಸ್ಥಾಪನೆಯಾಗಿ ಆರು ದಶಕಗಳಷ್ಟು ಕಾಲ ಕಳೆದರೂ ಮತ್ತು ಆರೇಳು ಪಂಚವಾರ್ಷಿಕ ಯೋಜನೆಗಳು ಆಗಿ ಹೋಗಿದ್ದರೂ ಪಂಚಾಯತ್ ರಾಜ್ಯ ಸಂಸ್ಥೆಗಳು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಳಿಸಿಕೊಳ್ಳುವುದರಲ್ಲಿ ವಿಫಲವಾಗಿವೆ. ಇದುವರೆಗೆ ರಾಷ್ಟ್ರವ್ಯಾಪಿ ಚುನಾವಣೆಗಳಲ್ಲಿ ಕಂಡು ಬಂದಿರುವ ಭ್ರಷ್ಟಾಚಾರ, ಜಾತೀಯತೆ, ಧರ್ಮಾಂಧತೆ, ಅಪರಾಧೀಕರಣ, ಧನದ ಬಲಾಢ್ಯತೆ ಮುಂತಾದ ದೋಷಗಳು ಪಂಚಾಯತ್ ರಾಜ್ಯ ಚುನಾವಣೆಗಳಲ್ಲೂ ಕಂಡು ಬರುತ್ತಿದೆ. ನಾಯಕರ ಮುಂದೆ ದೇಶವನ್ನು ಯಾವ ತತ್ವ-ಸಿದ್ಧಾಂತಗಳ ಆಧಾರದ ಮೇಲೆ ಕಟ್ಟಬೇಕೆಂಬ ಗುರಿಯಿಲ್ಲವೋ ಅದೇ ರೀತಿ ಪಂಚಾಯತ್ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿರುವ ಸ್ಥಳೀಯ ಮುಖಂಡರಲ್ಲಿಯೂ ತಮ್ಮ ಗ್ರಾಮಗಳನ್ನು ಮತ್ತು ಸಮುದಾಯಗಳನ್ನು ಯಾವ ಆದರ್ಶದ ಮೇಲೆ ಕಟ್ಟಬೇಕೆನ್ನುವುದು ಗೊತ್ತಿಲ್ಲ. ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದ ವಿವಿಧ ಯೋಜನೆಗಳ ಹೆಸರಿನಲ್ಲಿ ಹರಿದು ಬರುವ ಹಣವನ್ನು ಖರ್ಚುಮಾಡುವ ಏಜೆಂಟುಗಳಾಗಿ ಕೆಲಸ ಮಾಡುವುದಕ್ಕೆ ಮಾತ್ರ ಅವುಗಳ ಹೊಣೆಗಾರಿಕೆ ಸೀಮಿತವಾಗಿದೆ. ಸ್ಥಳೀಯ ಜನ ಸಮುದಾಯದ ಹಿತಕ್ಕಾಗಿ ಯಾವುದೇ ಹೊಸ ಬಗೆಯ ವಿಚಾರವನ್ನು ಮಾಡದಷ್ಟು ಪಂಚಾಯತ್ ಸಂಸ್ಥೆಗಳ ಸದಸ್ಯರು ಕೇಂದ್ರೀಕೃತ ರಾಜಕೀಯ, ಆರ್ಥಿಕ, ಶೈಕ್ಷಣಿಕ ನೀತಿಗಳಿಗೆ ಬಂಧಿತರಾಗಿದ್ದಾರೆ.

ಜಾಗತೀಕರಣದ ಇಂದಿನ ಕಾಲದಲ್ಲಿ ಪ್ರಜಾಪ್ರಭುತ್ವದ ರೀತಿ-ನೀತಿಗಳು ಕೂಡ ಬದಲಾಗಬೇಕಾದ ಸ್ಥಿತಿ ಉಂಟಾಗುತ್ತಿದೆ. ಅರ್ಥಶಾಸ್ತ್ರವೆಂಬುದು ಜಾಗತಿಕವಾಗುತ್ತಿರುವಾಗ ರಾಜ್ಯಶಾಸ್ತ್ರವು ರಾಷ್ಟ್ರೀಯವಾಗಿಯೇ ಉಳಿಯಲು ಸಾಧ್ಯವಿಲ್ಲ. ಅದು ಕೂಡ ಜಾಗತೀಕರಣದೊಂದಿಗೆ ಸಮೀಕರಿಸಿಕೊಳ್ಳಬೇಕಾಗುತ್ತದೆ. ಸಮೀಕರಣಗೊಳ್ಳಬೇಕಾದ ಈ ಪ್ರಕ್ರಿಯೆಯಲ್ಲಿ ಗ್ರಾಮಪಂಚಾಯಿತಿಗಳಿಗೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರು ಎಷ್ಟರ ಮಟ್ಟಿಗೆ ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ ಎಂಬುದು ಯೋಚಿಸಬೇಕಾದ ಸಂಗತಿ. ಏಕೆಂದರೆ ಗ್ರಾಮ ಪಂಚಾಯಿತಿಗಳ ಪುನರ್‌ರಚನೆಯ ಕಾಲದಲ್ಲಿ ರಮೇಶ್‌ಕುಮಾರ್ ಸಮಿತಿ ಈ ಬಗ್ಗೆ ಗಂಭೀರ ಚರ್ಚೆಯನ್ನು ಮಾಡಿದಂತಿಲ್ಲ. ಅಲ್ಲದೆ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಜನ ಸಮುದಾಯದಲ್ಲಿ ಜಾಗತೀಕರಣದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳು ಯಾವ

ರೀತಿ ಕೆಲಸಮಾಡಬೇಕಾಗುತ್ತದೆ ಎಂಬ ಸಾಮಾನ್ಯ ತಿಳುವಳಿಕೆಯನ್ನಾದರೂ ಕೊಡುವ ಕಷ್ಟವನ್ನು ಸರ್ಕಾರ ನಿರ್ವಹಿಸಿಲ್ಲ. ಕೇವಲ ಭೌತಿಕ ಅಭಿವೃದ್ಧಿ ವಿಚಾರ ಮತ್ತು ರಾಜಕೀಯ ವಿಚಾರಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡು ಪಂಚಾಯಿತಿ ಪುನರ್‌ರಚನೆಯ ವರದಿಯನ್ನು ತಯಾರಿಸಲಾಯಿತು ಎಂದೆನಿಸುತ್ತದೆ.

ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪ್ರವೇಶವಿಲ್ಲ ಎಂದು ಹೇಳುತ್ತಲಿದೆಯಾದರೂ ಪರೋಕ್ಷವಾಗಿ ಎಲ್ಲ ರಾಷ್ಟ್ರೀಯ ಪಕ್ಷಗಳು ಪಂಚಾಯತ್ ಚುನಾವಣೆಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ ಮತ್ತು ತಮ್ಮ ಕೈಚಳಕವನ್ನು ತೋರಿಸುತ್ತವೆ. ಇದರ ಪರಿಣಾಮವಾಗಿ ಗ್ರಾಮಗಳಲ್ಲಿರುವ ಅಲ್ಪ ಸ್ವಲ್ಪ ಸಮರಸತೆಯು ವಿಷಮಗೊಳ್ಳುತ್ತವೆ. ಅಭಿವೃದ್ಧಿಯ ಕೆಲಸಗಳ ಮೇಲೂ ಮತ್ತು ಇತರ ಸಾರ್ವಜನಿಕ ಕೆಲಸಗಳ ಮೇಲೂ ದುಷ್ಪರಿಣಾಮ ಬೀರುತ್ತವೆ. ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ರಾಜಕೀಯ ಪಕ್ಷಗಳು ತಮ್ಮ ಬಲಾಬಲವನ್ನು ಹೆಚ್ಚಿಸಿಕೊಳ್ಳುವ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿವೆ. ಇಂಥ ಬೆಳವಣಿಗೆ ಜಾಗತೀಕರಣದ ಹಿನ್ನೆಲೆಯಲ್ಲಿ ಅಸಂಗತವೆನಿಸುತ್ತದೆ. ಪರಿಸರ ಮತ್ತು ಹವಾಮಾನ ಬದಲಾವಣೆ ಮುಂತಾದವುಗಳು ಸ್ಥಳೀಯ ಸಮಸ್ಯೆಗಳಾಗಿರುವುದರ ಜೊತೆಗೆ ಜಾಗತಿಕ ಸಮಸ್ಯೆಗಳೂ ಆಗಿವೆಯಾದರೂ. ಈ ಸಮಸ್ಯೆಗಳಿಗೆ ಪರಿಹಾರ ಸಿಗುವ ಸಾಧ್ಯತೆ ಪಂಚಾಯತ್ ಮಟ್ಟದಲ್ಲಿ ಹೆಚ್ಚಾಗಿದೆ. ರಾಷ್ಟ್ರ ಮತ್ತು ಜಾಗತಿಕ ಮಟ್ಟಗಳಲ್ಲಿ ಇವುಗಳ ಪರಿಹಾರ ದೊರೆತರೂ ಅವುಗಳನ್ನು ಅನುಷ್ಠಾನಕ್ಕೆ ತರುವುದು ಪಂಚಾಯತ್ ಮಟ್ಟದಲ್ಲಿಯೇ ಸುಲಭ ಸಾಧ್ಯ. ಜಗತ್ತಿನ ಎಲ್ಲ ದೇಶಗಳಲ್ಲಿ ಅಭಿವೃದ್ಧಿ ಎಂಬುದು ದಿನನಿತ್ಯದ ಮಾತಾಗಿದೆ. ಆದರೆ ಅಭಿವೃದ್ಧಿಯ ಸ್ವರೂಪ ಹೇಗಿರಬೇಕೆಂಬುದರ ಬಗ್ಗೆ ಚಿಂತನೆಯು ನಡೆಯುತ್ತಿದೆ. ಅವುಗಳಲ್ಲಿ ಸುಸ್ಥಿರ ಅಭಿವೃದ್ಧಿ, ಅಸ್ಥಿರ ಅಭಿವೃದ್ಧಿ ಎಂಬ ಮಾತುಗಳು ಕೇಳಿಬರುತ್ತಿವೆ. ಅಭಿವೃದ್ಧಿಗೂ, ಪರಿಸರ ರಕ್ಷಣೆಗೂ ನಿಕಟ ಸಂಬಂಧವಿದೆ. ಪರಿಸರ ರಕ್ಷಣೆಯ ವಿಷಯ ಆರ್ಥಿಕಾಭಿವೃದ್ಧಿಯ ಜೊತೆಗೆ ಸಂಲಗ್ನಗೊಂಡಿದೆ. ಸುಸ್ಥಿರ ಅಭಿವೃದ್ಧಿಯೆಂಬ ಮಾತು ಪಾಶ್ಚಿಮಾತ್ಯರು ಟಂಕಿಸಿದ ಪದಗುಚ್ಛವಾಗಿದೆ. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳು ಸುಸ್ಥಿರ ಅಭಿವೃದ್ಧಿಯೆಂಬ ಈ ಹೊಸ ಕಲ್ಪನೆಗೆ ಜೊತು ಬಿದ್ದು ದಾರಿತಪ್ಪುವ ಸಂಭವವಿದೆ. ಆದ್ದರಿಂದ ಆ ಬಗ್ಗೆ ಪ್ರಾದೇಶಿಕ ಚಿಂತನೆಗಳು ಪ್ರಾರಂಭವಾಗಿವೆ. ಭಾರತದ ಮಟ್ಟಿಗೆ ಹೇಳುವುದಾದರೆ ಪರಿಸರಾತ್ಮಕ ಸ್ವರಾಜ್ಯ ಅಥವಾ ಪುರೋಗಾಮಿ ಪರಿಸರಾತ್ಮಕ ಪ್ರಜಾಪ್ರಭುತ್ವ (Ecological Swaraj or Radical Ecological Democracy) ಎಂಬ ಚಿಂತನೆ ಪ್ರಾರಂಭವಾಗಿದೆ. ಈ ಚಿಂತನೆಯ ಪ್ರಕಾರ ಪರಿಸರಾತ್ಮಕ ಪುರೋಗಾಮಿ ಪ್ರಜಾಪ್ರಭುತ್ವ ಗ್ರಾಮ ಪಂಚಾಯಿತಿಯ ಹಂತದಿಂದಲೇ ಪ್ರಾರಂಭವಾಗಬೇಕಾಗುತ್ತದೆ. ರಮೇಶ್‌ಕುಮಾರ ಸಮಿತಿಯ ಆಶಯ ಗ್ರಾಮ ಸ್ವರಾಜ್ಯ ಸ್ಥಾಪನೆ ಆಗಿತ್ತೆಂದು ತಿಳಿದುಬಂದಿದೆ. ಆದರೆ ಅನೇಕ ವೈರುಧ್ಯತೆ ಮತ್ತು ವಿಷಮತೆಗಳ

ಮೂಲಕ ಆಯ್ಕೆಯಾಗಿ ಬಂದಿರುವ ಹೊಸ ಪಂಚಾಯತ್ ಸಂಸ್ಥೆಗಳು ಈ ನಿಟ್ಟಿನತ್ತ ಕೆಲಸಮಾಡಬಲ್ಲವೆ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕಲು ಪಂಚಾಯಿತಿಗಳಿಗೆ ಯಾರು ಸಹಾಯ ಮಾಡಬಲ್ಲರು ಎಂಬುದು ಕೂಡ ಪ್ರಶ್ನೆಯಾಗಿಯೇ ಉಳಿಯುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳು ಸ್ಥಳೀಯ ವಿಷಯಗಳನ್ನು ಗಮನದಲ್ಲಿ ಇರಿಸಿಕೊಂಡು ಕ್ರಿಯಾಶೀಲರಾಗುವುದರ ಜೊತೆಗೆ ಜಾಗತಿಕವಾಗಿ ಯೋಚನೆಮಾಡುವ ಮನೋಭಾವವನ್ನು ಪಂಚಾಯಿತಿಗಳು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ಒಂದು ಸಂದಿಗ್ಧ ಪರಿಸ್ಥಿತಿ ಗ್ರಾಮ ಪಂಚಾಯಿತಿಗಳ ಮುಂದೆ ಉಂಟಾಗುತ್ತದೆ. ಈಗ ಭಾರತವನ್ನು ಅತ್ಯಂತ ಮುಂದುವರೆದ ದೇಶ ಮತ್ತು ಬಲಾಢ್ಯ ದೇಶವನ್ನಾಗಿ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಬಹು ರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸುತ್ತಿದೆ. ಆ ಕಂಪನಿಗಳು ಕೈಗಾರಿಕೆ ನಡೆಸಲು ಅನುಕೂಲವಾಗುವಂತೆ ಭೂಮಿಯನ್ನು ಕೊಡಲು ಮುಂದಾಗಿದೆ. ಅದಕ್ಕಾಗಿ ಭೂ ಸ್ವಾಧೀನ ಮಸೂದೆಯನ್ನು ಜಾರಿಗೊಳಿಸಲಿದೆ. ಗ್ರಾಮದ ವ್ಯವಸಾಯ ಯೋಗ್ಯ ಮತ್ತು ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು ಸರ್ಕಾರ ಸ್ವಾಧೀನಮಾಡಿಕೊಳ್ಳಲಿದೆ. ಇಂಥ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿಗಳ ನಿಲುವು ಯಾವ ಬಗೆಯದಾಗಿರುತ್ತದೆ ಎಂಬುದು ಕುತೂಹಲಕಾರಿ ವಿಷಯವಾಗಿದೆ. ಭೂಮಿ ಕಳೆದುಕೊಂಡ ಕಾರಣಕ್ಕಾಗಿ ವ್ಯವಸಾಯ ದುರ್ಬಲವಾಗಿ ಗ್ರಾಮಗಳು ನಿಸ್ತೇಜಗೊಂಡಾಗ, ಗ್ರಾಮದ ಯುವಕರು ನಗರಗಳಿಗೆ ವಲಸೆ ಹೋದರೆ ಗ್ರಾಮ ಪಂಚಾಯಿತಿಗಳಿಗೇನು ಕೆಲಸ? ಗ್ರಾಮ ಪಂಚಾಯಿತಿಗಳು ಸರ್ಕಾರದಿಂದ ಬರುವ ಅನುದಾನವನ್ನು ತಿರಸ್ಕರಿಸಿ ತನ್ನ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅಭಿವೃದ್ಧಿಯನ್ನು ಸಾಧಿಸಬಲ್ಲವೇ ಎಂಬುದು ಸಹ ಕುತೂಹಲಕಾರಿ ಪ್ರಶ್ನೆಯೇ ಆಗಿದೆ. ಡಾ.ಅಂಬೇಡ್ಕರರಿಗೆ ಗ್ರಾಮಗಳ ವಿಷಯದಲ್ಲಿ ಬಹಳಷ್ಟು ಆತಂಕಗಳಿದ್ದವು. ಪಂಚಾಯತ್ ರಾಜ್ಯ ವ್ಯವಸ್ಥೆಯಿಂದ ಗ್ರಾಮಗಳಲ್ಲಿಯ ಶೋಷಿತರ ಮತ್ತು ದಲಿತರ ಏಳಿಗೆಯಾಗುವುದೇ ಎಂಬ ಸಂದೇಹ ಅವರನ್ನು ಕಾಡುತ್ತಿತ್ತು. ಹೊಸ ಪಂಚಾಯಿತಿಗಳು ಅಂಬೇಡ್ಕರರ ಈ ಸಂದೇಹವನ್ನು ದೂರಮಾಡಬಲ್ಲವೇ ಎಂಬುದು ಕೂಡ ಕುತೂಹಲಕಾರಿ ಪ್ರಶ್ನೆ ಆಗಿದೆ. ಒಟ್ಟಿನಲ್ಲಿ ಪಂಚಾಯತ್ ರಾಜ್ಯದ ಗುರಿಯೇನು ಎಂಬುದು ಚುನಾಯಿತರಾಗಿ ಬಂದಿರುವ ಪಂಚಾಯತ್ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಾಗದಿದ್ದರೆ ಪಂಚಾಯತ್ ರಾಜ್ಯ ವ್ಯವಸ್ಥೆ ಅರ್ಥಹೀನವಾಗುತ್ತದೆ. ಆದ್ದರಿಂದಲೇ ಪಂಚಾಯತ್ ಚುನಾವನೆ ಮುಗಿಯಿತು, ಮುಂದೇನು ಗತಿ? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಭಾರತೀಯ ರಾಜನೀತಿಯಲ್ಲಿ ಸಾಮಾಜಿಕ ಸೌಖ್ಯಸೂತ್ರ

– ವಿದ್ವಾನ್ ಉಮಾಕಾಂತ ಭಟ್ಟ

ಸುಖವನ್ನು ಬಯಸದವರು ಯಾರು? ವಿಶ್ವದಲ್ಲಿ ಇರುವ ಎಲ್ಲ ಜೀವಿಗಳೂ ಸುಖವನ್ನು ಅಪೇಕ್ಷಿಸುತ್ತವೆ. ಸುಖವೆಂದರೆ ಏನು? ಎಂಬ ಅರಿವು ಅವುಗಳಲ್ಲಿ ಇಲ್ಲದಿರಬಹುದು. ಯಾವುದರಿಂದ ಸುಖವು ದೊರೆಯುತ್ತದೆ? ಎಂಬ ತಿಳಿವಳಿಕೆಯೂ ಉಂಟಾಗದಿರಬಹುದು. ಸುಖಾನುಭವವು ದೊರಕಿದ ಮೇಲೆ ಅದನ್ನು ಇನ್ನೊಂದು ಜೀವಿಗೆ ವಿವರಿಸುವ ಭಾಷಾಸೌಲಭ್ಯವೂ ಸಿಗದಿರಬಹುದು. ಆದರೂ ಸುಖವನ್ನು ಅನುಭವಿಸುವ ತವಕ ಅತ್ಯಂತ ಸಹಜವಾಗಿರುತ್ತದೆ ಅವುಗಳಲ್ಲಿ. ಬದುಕಿರುವವರೆಗೂ ಒಂದಿಲ್ಲೊಂದು ಸುಖವನ್ನು ಅರಸುತ್ತಲೇ ಮುಂದುವರೆಯುತ್ತವೆ. ಇದು ಕೇವಲ ಮನುಷ್ಯರ ಪಾಡಲ್ಲ. ಅಣುಜೀವಿಗಳಿಂದ ಆರಂಭಿಸಿ ಆನೆಯಂಥ ಬೃಹತ್ಪ್ರಾಣಿಗಳವರೆಗೆ ಎಲ್ಲ ಜೀವಿಗಳಲ್ಲೂ ಸುಖಪ್ರತ್ಯಾಶೆಗಳು ಓತಪ್ರೋತವಾಗಿವೆ. ಅವುಗಳ ದೇಹ ರಚನೆ, ಇಂದ್ರಿಯ ಸಂಪತ್ತಿ, ಮನೋವಿಕಾಸಗಳಲ್ಲಿ ಗಣನೀಯವಾದ ತಾರತಮ್ಯವಿರಬಹುದು. ಇದರಿಂದಲೇ ಅವುಗಳ ದೈಹಿಕ ಶಕ್ತಿ, ಮಾನಸಿಕ ಬಲ, ಆರೋಗ್ಯ, ಆಯುರ್ಮಾನ ಮೊದಲಾದ ಅಂಶಗಳಲ್ಲಿ ಅತ್ಯಧಿಕ ವ್ಯತ್ಯಾಸಗಳು ಏರ್ಪಟ್ಟಿರಲೂಬಹುದು. ಆದರೂ ಸುಖವನ್ನು ಹಂಬಲಿಸುವ, ಸುಖದ ಕಡೆ ವಾಲುವ ಪ್ರವೃತ್ತಿಯು ಅವುಗಳಲ್ಲಿ ಸಮಾನವಾಗಿದೆ.

ಆದರೆ ಜೀವಿಗಳು ಸುಖವನ್ನು ಮಾತ್ರ ಅನುಭವಿಸುತ್ತವೆ ಎಂಬ ನಿಯಮವಿಲ್ಲ. ಹಾಗಿರುತ್ತಿದ್ದರೆ ಜಗತ್ತಿನಲ್ಲಿ ಅಳುವೇ ಹುಟ್ಟಿಕೊಳ್ಳುತ್ತಿರಲಿಲ್ಲ. ಕಂಬನಿಯೇ ಮಿಡಿಯುತ್ತಿರಲಿಲ್ಲ. ಅವು ದುಃಖವನ್ನು ಅನುಭವಿಸಬೇಕಾಗುತ್ತದೆ. ಹೆಚ್ಚೇಕೆ! ದುಃಖವನ್ನೇ ಬಹುವಾಗಿ ಅನುಭವಿಸುವಂತಾಗುತ್ತದೆ. ಸುಖದ ಆಸೆಯಿಂದ ತೊಡಗಿ, ತೊಡರಿಗೆ ಸಿಕ್ಕುಬಿದ್ದು, ಆಪತ್ತುಗಳಿಗೆ ಗೋಣನ್ನೊಡ್ಡಬೇಕಾಗುತ್ತದೆ. ದುಃಖದ ಜಾಲದಲ್ಲಿ ಸಿಕ್ಕುಬಿದ್ದು, ಒದ್ದಾಡಬೇಕಾಗುತ್ತದೆ. ದುಃಖದ ಸ್ಪರ್ಶ ಇಲ್ಲದ ಸುಖ ಇಲ್ಲವೇ ಇಲ್ಲ ಎಂಬಷ್ಟು ಅಪರೂಪವದು. ಸುಖಸಾಮಾನ್ಯವೇ ದುಃಖಮಿಶ್ರ ಎಂಬುದು ಲೋಕಾನುಭವ. ಆದುದ್ದರಿಂದ ಬೇಡವೆಂದರೂ ದುಃಖವನ್ನು ತಪ್ಪಿಸಿಕೊಳ್ಳಲಾಗದು; ಬೇಕೆಂದರೂ ಸುಖವನ್ನು ಪಡೆಯಲಾಗದು. ಸಂಸಾರವೆಂದಮೇಲೆ ಸುಃಖದುಃಖಗಳನ್ನು

ಜೊತೆಯಾಗಿಯೇ ಒಪ್ಪಿಕೊಳ್ಳಬೇಕಷ್ಟೆ! ಅವು ಬದುಕಿನಲ್ಲಿ ಹಗಲು-ರಾತ್ರಿಗಳಷ್ಟು ಸಹಜವಾಗಿವೆ.

ಮನುಷ್ಯ ಬುದ್ಧಿಜೀವಿ. ಆಲೋಚನೆಯನ್ನು ಜೀವನದ ಹೆಜ್ಜೆಹೆಜ್ಜೆಗಳಲ್ಲಿ ಬಳಸಿಕೊಳ್ಳುವಷ್ಟು ಭಾಗ್ಯವಂತ. ಅವನ ದೇಹ-ಧಮನಿಗಳು, ಇಂದ್ರಿಯ-ಮನಸ್ಸುಗಳು, ಪ್ರಾಣ-ತ್ರಾಣಗಳು ಉಳಿದ ಪ್ರಾಣಿಗಳಿಗಿಂತ ವಿಕಸಿತವಾಗಿವೆ. ಜೊತೆಗೆ ಅಧ್ಭುತವಾದ ಪ್ರತಿಭೆ, ಅಸಾಧಾರಣವಾದ ಸ್ಮರಣಶಕ್ತಿ, ಪಟುವಾದ ಭಾಷಣಕೌಶಲಗಳು ಅವನ ಜೀವನದ ಸೌಭಾಗ್ಯವನ್ನು ಹೆಚ್ಚಿಸಿವೆ. ಅವುಗಳ ದೆಸೆಯಿಂದಾಗಿ ಅವನ ಬದುಕು ಭವ್ಯವಾಗಿದೆ, ನವ್ಯವಾಗಿದೆ, ಸುಭದ್ರವಾಗಿದೆ. ಆದುದರಿಂದ ಅವನ ಸುಖದ ಆಸೆಗೆ ಸೀಮೆಯಿಲ್ಲ. ನೆಮ್ಮದಿಯನ್ನು ಅರಸುವ ಹರಿಮನಸ್ಸಿಗೆ ಲಂಗುಲಗಾಮುಗಳಿಲ್ಲ. ಸುಖವೆಂದರೇನು? ಅದರ ಸಾಮಗ್ರಿಗಳಾವುವು? ಅದನ್ನು ಅನುಭವಿಸುವ ಪರಿಗಳು ಯಾವುವು? ಅದರ ಅನುಭವದಲ್ಲಿ ನೈರಂತರ್ಯವು ಹೇಗೆ? ಇತ್ಯಾದಿ ವಿಷಯಗಳನ್ನು ಸಂಶೋಧಿಸುತ್ತಲೇ ಇದ್ದಾನೆ. ದುಃಖವೆಂದರೇನು? ಅದರ ಸಾಮಗ್ರಿಗಳಾವುವು? ಅದನ್ನು ತಪ್ಪಿಸಿಕೊಳ್ಳಲು ಉಪಾಯಗಳೇನಿವೆ? ಎಂಬುದನ್ನೂ ಹುಡುಕಿಕೊಳ್ಳುತ್ತಿದ್ದಾನೆ. ಈ ಮಹೋದ್ಯಮದಲ್ಲಿ ಅವನು ಕೊಂಚಮಟ್ಟಿಗೆ ಯಶಸ್ವಿಯೂ ಆಗಿದ್ದಾನೆ. ಆದರೆ ಅವನು ದುಃಖವನ್ನು ಹಂಚಿಕೊಳ್ಳಲು ಸಿದ್ಧನಿದ್ದರೂ ಸುಖವನ್ನು ಮಾತ್ರ ಹಂಚಿಕೊಳ್ಳಲು ಬದ್ಧನಿಲ್ಲ. ಆದುದರಿಂದ ಉಳಿದ ಪ್ರಾಣಿವರ್ಗಗಳಲ್ಲಿ ಅಷ್ಟಾಗಿ ಕಂಡುಬರದ ಸ್ಪರ್ಧೆ-ಸಂಘರ್ಷಗಳೂ, ಅಸೂಯೆ ಅಹಂಕಾರಗಳೂ, ರಾಗ-ದ್ವೇಷಗಳೂ ಮಾನವರಲ್ಲಿ ತಲೆಯೆತ್ತಿವೆ. ಈ ಕಾರಣದಿಂದಲೆ ಮಾನವನು ಮಾಧವನಾಗಲಿಲ್ಲ; ದಾನವನಾಗುತ್ತ ಭೂಭಾರಕನಾಗುತ್ತಿದ್ದಾನೆ. ಸುಖದ ಆಸೆ ತಪ್ಪಲ್ಲ. ಅದನ್ನು ಪಡೆಯುವ ರೀತಿ ಮತ್ತು ಅನುಭವಿಸುವ ಪರಿಗಳು ಮುಖ್ಯ. ಲೋಕಹಿತ ಹಾಗೂ ಸಮಷ್ಟಿಕ್ಷೇಮದ ಒರೆಗಲ್ಲಿಗೆ ತಿಕ್ಕಿ ಅವುಗಳನ್ನು ವಿವೇಚಿಸುವ ಅಗತ್ಯವಿದೆ.

ಸೌಖ್ಯವೆಂದರೆ ಸುಖ, ಸುಖವೆಂದರೆ ನೆಮ್ಮದಿ. ದೇಹ, ಇಂದ್ರಿಯ, ಮನಸ್ಸು, ಮತ್ತು ಪ್ರಾಣಗಳು ತಮ್ಮ ತಮ್ಮ ಸ್ವರೂಪ ಹಾಗೂ ಸ್ವಭಾವಗಳಲ್ಲಿ ಕೊರತೆಯಿಲ್ಲದೆ ಹೊರೆಯೆನ್ನದೆ ಹಾಯಾಗಿ-ಸಹಜವಾಗಿ ನೆಲೆ ನಿಲ್ಲುವ ಸ್ಥಿತಿವಿಶೇಷ. ಇದು ಎಲ್ಲರಿಗೂ ಅನುಕೂಲವಾದುದು; ಯಾರಿಗೂ ಪ್ರತಿಕೂಲವಾದುದಲ್ಲ. ಹಾಗಾಗಿಯೇ ಹಿರಿಯರು "ಸರ್ವೇಷಾಮ್ ಅನುಕೂಲತಯಾ ವೇದನೀಯಂ ಸುಖಮ್, ಪ್ರತಿಕೂಲತಯಾ ವೇದನೀಯಂ ದುಃಖಮ್" ಎಂದು ಸುಃಖದುಃಖಗಳನ್ನು ನಿರ್ವಚನಮಾಡಿದ್ದಾರೆ. ಒಬ್ಬನಿಗೆ ಸಿಹಿ ಇಷ್ಟ; ಇನ್ನೊಬ್ಬನಿಗೆ ಕಹಿ ಇಷ್ಟ, ಒಬ್ಬಳಿಗೆ ಲಂಗ ಅಂದ; ಇನ್ನೊಬ್ಬಳಿಗೆ ಸೀರೆ ಚಂದ. ಅವರವರಿಗೆ ಅದದೇ ಅನುಕೂಲ. ಆದ್ದರಿಂದ ಅದುವೆ ಸುಖ.

ಸುಖವೆಲ್ಲ ಇಷ್ಟವಾದರೂ ಇಷ್ಟವಾದುದೆಲ್ಲ ಸುಖವಾಗಬೇಕು ಎಂಬ ನಿಯಮವಿಲ್ಲ. ನೆಮ್ಮದಿ ಎಂಬ ವಸ್ತುವೊಂದಿರದಿದ್ದರೆ ಯಾರ ಬದುಕಿಗೂ ಅರ್ಥವಿರುತ್ತಿರಲಿಲ್ಲ. ಆದುದರಿಂದ ಇದೇ ಶ್ರೇಷ್ಠವಾದ ಪುರುಷಾರ್ಥ, ಪುರುಷನೇ-ಗಂಡಾಗಲಿ, ಹೆಣ್ಣಾಗಲಿ- ನಿಯತವಾಗಿ ನಿರಂತರವಾಗಿ ಅಪೇಕ್ಷಿಸುವ ಸದರ್ಥ. ತನ್ನಲ್ಲಿ ತನಗಾಗಿ, ತಾನೇ ನೆಲೆ ನಿಲ್ಲುವ 'ಸ್ವಾಸ್ಥ್ಯ' ಈ ಸೌಖ್ಯ.

ವೈಯಕ್ತಿಕವಾಗಿಯೂ, ಸಾಮುದಾಯಿಕವಾಗಿಯೂ ಇಂಥ ಸುಖವನ್ನು ದೊರಕಿಸಿಕೊಡುವುದು ಶಾಸ್ತ್ರಗಳ ಗುರಿಯಾಗಿದೆ. ಹಿತಾನುಶಾಸನವು ಶಾಸ್ತ್ರವಷ್ಟೇ! ವಿಶೇಷತಃ ರಾಜನೀತಿಯ ಚರಮಲಕ್ಷ್ಯವೇ ಭೂಮಿಯ ಲಾಭ ಮತ್ತು ಪಾಲನೆ. ಮನುಷ್ಯರ ವೃತ್ತಿ (ಉದ್ಯಮ, ಪ್ರವೃತ್ತಿ, ಜೀವನ) ಅರ್ಥ. ಅದರ ಯೋಗಕ್ಷೇಮಗಳ ನಿರ್ವಹಣೆಗೆ ಪ್ರವೃತ್ತವಾದ ಶಾಸ್ತ್ರ ಅರ್ಥಶಾಸ್ತ್ರ. ಆದುದರಿಂದ ಪೌರನೀತಿ ಮತ್ತು ರಾಜನೀತಿಗಳು ಈ ಅರ್ಥಶಾಸ್ತ್ರದ ಪ್ರಧಾನವಾದ ಮುಖಗಳಾಗಿವೆ.

ಭಾರತೀಯ ಅರ್ಥಶಾಸ್ತ್ರ ಪ್ರವರ್ತಕರಲ್ಲಿ ಕೌಟಿಲ್ಯ, ಚಾಣಕ್ಯ, ಮೊದಲಾದ ಅನೇಕ ಅನ್ವರ್ಥಕವಾದ ಹೆಸರುಗಳಿಂದ ಕರೆಯಲ್ಪಟ್ಟ ವಿಷ್ಣುಗುಪ್ತನೇ ಅಗ್ರಗಣ್ಯನಾದವನು. ಮನು, ಬೃಹಸ್ಪತಿ, ಶುಕ್ರ, ಭಾರದ್ವಾಜ, ವಿಶಾಲಾಕ್ಷ, ಪರಾಶರ, ನಾರದ, ಭೀಷ್ಮ, ಉದ್ಧವ, ಇಂದ್ರ ಮೊದಲಾದ ಅರ್ಥಶಾಸ್ತ್ರ ಪ್ರವರ್ತಕರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ಉದ್ಧರಿಸಿ, ಉದಾಹರಿಸಿದ ದಕ್ಷನೂ ದೀಮಂತನೂ, ಆದ ಶಾಸ್ತ್ರಪ್ರವರ್ತಕನು ಈತ, ಆದುದರಿಂದಲೇ ಹಿರಿಯ ಆಪ್ತ ವಿದ್ವಾಂಸರು ಇವನನ್ನು ವಿಷ್ಣುಗುಪ್ತ ಅಂದರೆ ಗುಪ್ತವಿಷ್ಣು ಎಂದೇ ಗೌರವಿಸುತ್ತಾರೆ. ಇವನ ಒಂದೊಂದು ಸೂತ್ರವೂ ವೇದಕ್ಕೆ ಸಮ; ಅರ್ಥಶಾಸ್ತ್ರಕ್ಕೆ ಉಪವೇದದ ಪದವಿಯನ್ನು ಹೊಂದಿಸುವ ಸೇತು. ಇವನು ವಿನಯಾಧಿಕಾರದ ಎಂಬ ಅಧಿಕರಣದ ವಿದ್ಯಾಸಮುದ್ದೇಶ ಪ್ರಕರಣದಲ್ಲಿ ಆಡಿದ ಮಾತು ಲೋಕಪ್ರಸನ್ನತೆಯ ಸಿದ್ಧಿಗೆ ಎತ್ತಿಹಿಡಿದ ಕೈಗನ್ನಡಿ.

ವ್ಯವಸ್ಥಿತಾರ್ಯಮರ್ಯಾದಃ ಕೃತವರ್ಣಾಶ್ರಮಸ್ಥಿತಿಃ।
ತ್ರಯ್ಯಾ ಹಿ ರಕ್ಷಿತೋ ಲೋಕಃ ಪ್ರಸೀದತಿ ನ ಸೀದತಿ॥

ಆರ್ಯಮರ್ಯಾದೆಯ ವ್ಯವಸ್ಥೆಯನ್ನು ಪಡೆದ ವರ್ಣಾಶ್ರಮದ ಸ್ಥಿತಿಯನ್ನು ಏರ್ಪಡಿಸಿಕೊಂಡ, ತ್ರಯೀಧರ್ಮದಿಂದ ರಕ್ಷೆಯನ್ನು ಹೊಂದಿದ ರಾಜ್ಯವು ಪ್ರಸನ್ನವಾಗಿರುತ್ತದೆ; ಅದು ಎಂದಿಗೂ ನಾಶಹೊಂದುವುದಿಲ್ಲ. ಲೋಕವೆಂದರೆ ಭುವನ ಅಥವಾ ಜನ. ಒಬ್ಬೊಬ್ಬ ವ್ಯಕ್ತಿಯೂ ಪ್ರಸನ್ನತೆಯನ್ನು ಪಡೆಯದೆ ಭುವನಪ್ರಸಾದವು ಸಿದ್ಧಿಸುವುದಿಲ್ಲ. ವಿಶ್ವದ ನೆಮ್ಮದಿಗೆ ತಳಹದಿಯಾದುದು ಏಕೈಕ ವ್ಯಕ್ತಿಯ ನೆಮ್ಮದಿ. ವ್ಯಷ್ಟಿಹಿತವು ಕೈಗೊಡದೆ ಸಮಷ್ಟಿಹಿತವು ಸಂಪನ್ನವಾಗುವುದಾದರೂ ಹೇಗೆ? ಈ

ಲೋಕಪ್ರಸನ್ನತೆಗೆ ಆವಶ್ಯಕವಾದ ಮೂಲಕಾರಣಗಳು ಮೂರು ೧. ಆರ್ಯ ಮರ್ಯಾದೆ ೨. ವರ್ಣಾಶ್ರಮವ್ಯವಸ್ಥೆ ೩. ತ್ರಯೀಧರ್ಮ. ಇವುಗಳಿಂದ ಎಂಥ ಜನತೆಯೂ ಶಿಷ್ಟ ಅಥವಾ ಸಭ್ಯ ಜನಾಂಗವಾಗಿ ರೂಪುಗೊಳ್ಳುತ್ತದೆ. 'ಆರ್ಯಸಮಾಜ'ವಾಗಿ ಬೆಳಗುತ್ತದೆ.

ಆರ್ಯಮರ್ಯಾದಾ

'ಆರ್ಯ' ಎಂಬ ಶಬ್ದವು 'ಋಗತೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಆದುದರಿಂದ ಜ್ಞಾನಿ–ವಿವೇಕಿ ಎಂಬ ಅರ್ಥವನ್ನು ಕೊಡುತ್ತದೆ. ಒಳಹೊಕ್ಕು ಪ್ರಕೃತಿಯನ್ನು ಅರ್ಥಮಾಡಿಕೊಂಡವರು ಆರ್ಯರು. ಸಾಧಾರಣವಾದ ಕಾರ್ಯ ಕಾರಣಭಾವದಿಂದ ಆರಂಭಿಸಿ ಆತ್ಯಂತಿಕವಾದ ಪ್ರಕೃತಿಪುರುಷವಿವೇಕದ ವರೆಗೆ ವ್ಯುತ್ಪತ್ತಿಯನ್ನು ಪಡೆದ ಧೀಮಂತರು ಇವರು. ಪರಕ್ಕೆ ವಿರೋಧವಾಗದಂತೆ ಇಹದ ಬಾಳ್ವೆಯನ್ನು ರೂಪಿಸಿಕೊಂಡ ಋಷಿಗಳಿವರು. ಆಮುಷ್ಮಿಕವಾದ ಆನಂದವನ್ನು ಪಡೆಯುವುದಕ್ಕಾಗಿ ಐಹಿಕವಾದ ಬದುಕನ್ನು ತಿದ್ದಿತೀಡಿಕೊಂಡರೂ ವೈಷಯಿಕ – ಐಂದ್ರಿಯಿಕ ಸುಖವನ್ನು ಕಡೆಗಾಣಿಸದೆ ಕಂಡುಂಡ ಕುಶಲಮತಿಗಳು.

ಧರ್ಮಾವಿರೋಧೇನ ಅರ್ಥಕಾಮೌ ಸೇವೇತ ನ ನಿಸ್ಸುಖಃ ಸ್ಯಾತ್?

'ಧರ್ಮಕ್ಕೆ ವಿರೋಧವಿಲ್ಲದಂತೆ (ಸಂಯಮದಿಂದ) ಅರ್ಥ ಮತ್ತು ಕಾಮಗಳನ್ನು ಅನುಭವಿಸಬೇಕು. ಸುಖವನ್ನು ಕಳೆದುಕೊಳ್ಳಬಾರದು' ಎಂದು ಜೀವನಕ್ಕೆ ಸಂಯಮದ ಸೀಮೆಯನ್ನು ನಿಶ್ಚಯಿಸಿಕೊಂಡವರು ಆರ್ಯರು. ಕಟ್ಟುಪಾಡಿನ ಬದುಕನ್ನು ಒಪ್ಪಿಕೊಂಡವರು; ಕೊಟ್ಟ ಮಾತನ್ನು ತಪ್ಪದವರು; ಕೆಟ್ಟ ಯೋಚನೆ ಮಾಡದವರು; ಹುಟ್ಟಿನ ಗುಟ್ಟನ್ನು ಅರಿತವರು; ಸಾವಿನ ಆಚೆಯನ್ನು ಮರೆಯದವರು ಇವರೇ. ಮನೆ ಬೇಕು; ಮಠ ಬೇಕು; ಮಡದಿಯಿರಬೇಕು; ಮಕ್ಕಳಾಗಬೇಕು; ಅನ್ನ ಪಾನಗಳು ಹೆಚ್ಚಬೇಕು, ಧವಸ ಧಾನ್ಯಗಳು ತುಂಬಿರಬೇಕು; ಧನ ಕನಕಗಳು ಸಿಗಬೇಕು, ನಗನಾಣ್ಯಗಳು ಝಣಝಣಿಸಬೇಕು, ... ಹೀಗೆ ಹಲವನ್ನು ಬಯಸುವುದು ತಪ್ಪಲ್ಲ. ಸಿಕ್ಕವುಗಳನ್ನು ಅನುಭವಿಸುವುದು ಅಪರಾಧವಲ್ಲ. ಇದು ಜೀವಿಗಳ ಸಹಜಪ್ರವೃತ್ತಿಯಷ್ಟೇ! ಆದರೆ ವಿಶ್ವದ ಧಾರಕಶಕ್ತಿಯಾದ, ಎಲ್ಲ ವಸ್ತುಗಳನ್ನೂ ಸ್ವಸ್ವರೂಪದಲ್ಲೇ ಸಾಂಕರ್ಯವಿಲ್ಲದೆ ನೆಲೆ ನಿಲ್ಲಿಸುವ ಧರ್ಮಕ್ಕೆ ವಿರೋಧವೇರ್ಪಡದಂತೆ ಎಚ್ಚರ ವಹಿಸಿ ಸುಖವನ್ನು ಅನುಭವಿಸಬೇಕು. ಇದೇ ಆರ್ಷದೃಷ್ಟಿ ಇದೇ ಆರ್ಯಪದ್ಧತಿ. ಉರಿಯುವುದು ಬೆಂಕಿಯ ಸ್ವಭಾವ, ಹರಿಯುವುದು ನೀರಿನ ಪ್ರಕೃತಿ, ಬೀಸುವುದು ಗಾಳಿಯ ಸ್ವರೂಪ, ಹೊರುವುದು ಭೂಮಿಯ ಗುಣ, ಅವಕಾಶವನ್ನು ಕಲ್ಪಿಸಿಕೊಡುವುದು ಆಗಸದ ಸ್ವಭಾವ–ಹೀಗೆ ಎಲ್ಲ ಭೌತ ಮತ್ತು ಅಭೌತಿಕ ವಸ್ತುಗಳಿಗೂ ಸಹಜಗುಣಗಳಿರುತ್ತವೆ, ಧರ್ಮಗಳಿರುತ್ತವೆ.

ಆ ಆ ಧರ್ಮಗಳೇ ಆ ಆ ವಸ್ತುಗಳನ್ನು ಧರಿಸಿ ನಿಲ್ಲಿಸಿವೆ. ತನ್ಮೂಲಕ ಇಡೀ ವಿಶ್ವಕ್ಕೆ ಆಧಾರವೆನಿಸಿವೆ. ಆದುದರಿಂದ ಅವು ಅವುಗಳಿಗೆ ಸ್ವಧರ್ಮ. ಇದೇ ರೀತಿ ಅಸಂಖ್ಯಸಂಖ್ಯೆಯ ಜೀವರಿಗೂ ಸ್ವಧರ್ಮಗಳಿವೆ. ಸ್ವಧರ್ಮ ಪರಿಪಾಲನೆಯೇ ವಿಶ್ವವ್ಯವಸ್ಥೆಯ ಆಧಾರಶಿಲೆ. ಇದನ್ನು ಅರಿತು ಬಾಳುವುದೇ ಆರ್ಯಮರ್ಯಾದೆ.

ಸ್ವಧರ್ಮೇ ನಿಧನಂ ಶ್ರೇಯ ಪರಧರ್ಮೋ ಭಯಾವಹಃ ?

–ಎಂಬ ಗೀತೆಯ ಮಾತಿನ ಆಶಯವೂ ಇದೇ ತಾನೆ! ಸ್ವಧರ್ಮವನ್ನು ಅತಿಕ್ರಮಿಸಬಾರದು. ಪರಧರ್ಮದ ಮೋಹದಿಂದ ಅದನ್ನು ತಿರಸ್ಕರಿಸಬಾರದು. ಹಾಗೆ ನಡೆದುಕೊಂಡರೆ ಪ್ರಕೃತಿವಿಕೋಪವು ತಪ್ಪುವುದಿಲ್ಲ.

'ಆರ್ಯ' ಎಂಬುದು ಯಾವುದೋ ಒಂದು ಜನಾಂಗದ ಹೆಸರಾಗಬೇಕಾದ ಆವಶ್ಯಕತೆಯಿಲ್ಲ. ಆರ್ಯರು ಮಧ್ಯಏಷ್ಯಾದಿಂದ ವಿಶ್ವದ ನಾನಾಭಾಗಗಳಿಗೆ ವಲಸೆ ಹೋದರು ಎಂಬ ಇತಿಹಾಸಕ್ಕೆ ಬೆಲೆಯೂ ಇಲ್ಲ. ಇದರರ್ಥ–ಇತಿಹಾಸದ ಘಟನೆ ಸುಳ್ಳು; ಅದನ್ನು ಯಾರೂ ನಂಬಲಾಗದು ಎಂದೇನೂ ಇಲ್ಲ. ಆರ್ಯ ಎಂಬ ಪದಕ್ಕೆ ಯೌಗಿಕವಾಗಿ ಈ ವಿಶಾಲ ಅರ್ಥವನ್ನು ಗ್ರಹಿಸಿ ವ್ಯವಹರಿಸುವಾಗ ಇಂಥ ಐತಿಹಾಸಿಕ ವಿವರಗಳಿಗೆ ಪ್ರಾಶಸ್ತ್ಯವಿಲ್ಲ ಎಂದೇ ಅಭಿಪ್ರಾಯ. ಜೀವನದ ಪರಮಾದರ್ಶಕ್ಕೆ ಕೊಟ್ಟ ಮತ್ತೊಂದು ಹೆಸರು ಆರ್ಯ. ಆ ಬದುಕಿನ ಹರಹು –ಎಲ್ಲೆಗಳೇ ಆರ್ಯ ಮರ್ಯಾದೆ. ಅದರ ವ್ಯವಸ್ಥೆಯೇ ರಾಜನೀತಿಯ ಚರಮಲಕ್ಷ್ಯವಾಗಿದೆ.

ಆರ್ಯಮರ್ಯಾದೆಯ ಇನ್ನೊಂದು ಮುಖ ಇಂದ್ರಿಯಜಯ. ಇಂದ್ರಿಯಗಳನ್ನು ಗೆಲ್ಲದೆ ಇಂದ್ರನನ್ನು ಗೆಲ್ಲಲು ಸಾಧ್ಯವಿಲ್ಲ. ಇಂದ್ರಿಯಗಳನ್ನೇ ಗೆಲ್ಲಲಾರದವನು ಇಂದ್ರನನ್ನು ಗೆದ್ದರೂ, ಇಂದ್ರ ಪದವಿಯನ್ನು ಪಡೆದರೂ ಪತನವು ತಪ್ಪುವುದಿಲ್ಲ. ಆದುದರಿಂದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗವನ್ನು ತೊರೆದು ಇಂದ್ರಿಯಗಳನ್ನು ಜಯಿಸಬೇಕು.

ಕೃತ್ಸ್ನಂ ಹಿ ಶಾಸ್ತ್ರಮಿದಮಿಂದ್ರಿಯಜಯಃ।

ಅರ್ಥಶಾಸ್ತ್ರವೆಲ್ಲ ಇಂದ್ರಿಯಜಯಕ್ಕಾಗಿಯೇ ಹೊರಟಿದೆ. ರಾಜ್ಯವೆಂದರೆ ಇಂದ್ರಿಯಗಳ ಸೀಮೆ. ಅದನ್ನು ಗೆಲ್ಲುವುದೇ ರಾಜನೀತಿ. ಅದುವೇ ಪ್ರಜಾನೀತಿ. ಇಂದ್ರಿಯಗಳನ್ನು ಗೆದ್ದವನಿಗೆ ಭಯವಿಲ್ಲ; ಶೋಕವಿಲ್ಲ. ಅಂಥವನು ಎಂದಿಗೂ ಅನಾರ್ಯನಾಗುವುದಿಲ್ಲ.

ಸಮಾಜಸೌಖ್ಯದ ಇನ್ನೆರಡು ಕಾರಣಗಳು ವರ್ಣಾಶ್ರಮವ್ಯವಸ್ಥೆ ಮತ್ತು ತ್ರಯೀಧರ್ಮ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ –ಇವು ಚಾತುರ್ವರ್ಣ್ಯಗಳು. ಗುಣ ಹಾಗೂ ಕರ್ಮಗಳ ತಾರತಮ್ಯದಿಂದ ಏರ್ಪಟ್ಟವು. ಇಂದು ಚಾತುರ್ವರ್ಣ್ಯದ ಅಂದಗೆಟ್ಟಿದೆ; ಸತ್ತ್ವ ಮಸಳಿಸಿದೆ. ಆದರೂ ಇದು ಅತ್ಯಂತ ನೈಸರ್ಗಿಕವಾದ ವ್ಯವಸ್ಥೆ

ಎಂಬುದನ್ನು ಮರೆಯುವಂತಿಲ್ಲ. ಇದರ ಜೊತೆಗೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ಆಶ್ರಮಗಳ ವ್ಯವಸ್ಥೆಯೂ ಅತ್ಯಂತ ಪ್ರಯೋಜನಕಾರಿಯಾದುದಾಗಿದೆ. ವರ್ಣಧರ್ಮ, ಆಶ್ರಮಧರ್ಮ, ವರ್ಣಾಶ್ರಮಧರ್ಮ, ಸಾಮಾನ್ಯಧರ್ಮ ಮತ್ತು ವಿಶೇಷಧರ್ಮಗಳನ್ನು ಅರುಹುವ ವಾಙ್ಮಯ ತ್ರಯೀ. ಋಗ್ವೇದ, ಯಜುರ್ವೇದ, ಸಾಮವೇದಗಳೇ ತ್ರಯೀ. ತ್ರಯಿಯ ಔದಾರ್ಯವು ಅಸೀಮವಾಗಿದೆ. ಸಾವಿರ ಸಾವಿರ ತಂದೆ ತಾಯಂದಿರ ವಾತ್ಸಲ್ಯಕ್ಕೆ ಮೀರಿದ ವಾತ್ಸಲ್ಯ ಅದರದು. ಅದರ ಮುಖ್ಯ ತಾತ್ಪರ್ಯವಿರುವುದು ಧರ್ಮದಲ್ಲಿ. ಎಲ್ಲರಿಗೂ ತ್ರಯೀಧರ್ಮವು ಅತ್ಯಂತ ಸುಹೃತ್. ಅದು ಯಾರಿಗೂ ಶತ್ರುವಲ್ಲ. ಆದುದರಿಂದ

ಶತ್ರುಣಾಪಿ ಕೃತೋ ಧರ್ಮಃ ಪಾಲನೀಯೋ ಮನೀಷಿಭಿಃ ।
ಶತ್ರುರೇವ ಹಿ ಶತ್ರುಃ ಸ್ಯಾತ್ ಧರ್ಮಃ ಶತ್ರುರ್ನ ಕಸ್ಯಚಿತ್ ॥

ಶತ್ರುವೇ ಮಾಡಿದರೂ ಧರ್ಮವನ್ನು ವಿಚಾರವಂತರು ರಕ್ಷಿಸಬೇಕು. ಶತ್ರು ಮಾತ್ರ ಶತ್ರುವೇ ಹೊರತು ಧರ್ಮವು ಯಾರಿಗೂ ಶತ್ರುವಲ್ಲ. ಇಂಥ ಧರ್ಮವೇ ಮೂಲವೂ ಫಲವೂ ಆದ ಜೀವನವೇ ಆರ್ಯಜೀವನ. ಹಳತಾದರೂ ಇದು ಎಂದಿಗೂ ಹಳಸುವುದಿಲ್ಲ. ಯಾರನ್ನೂ ಹಳಹಳಿಸುವಂತೆ ಮಾಡುವುದಿಲ್ಲ. ರಾಜ್ಯದಲ್ಲಿ ಆರ್ಯಮರ್ಯಾದೆಯನ್ನು ಕಾಪಿಡಲು ಅಧಿಕಾರ ಸೂತ್ರವನ್ನು ಹಿಡಿದವರು.

ಉತ್ಥಾನೇನ ಯೋಗ ಕ್ಷೇಮಸಾಧನಂ ಕುರ್ವೀತ ।

ಪ್ರಬುದ್ಧರಾಗಿ, ರಾಜಕಾರ್ಯಧುರಂಧರರಾಗಿ, ಪ್ರಜೆಗಳಿಗೆ ಹಿತವನ್ನು ತಿಳಿಸಿ, ಕಾರ್ಯಾನುಶಾಸನ ಮಾಡಿ, ಅವರ ಯೋಗ ಕ್ಷೇಮಗಳನ್ನು ಸಾಧಿಸಿಕೊಡಬೇಕು. ಆಗಲೇ 'ಸ್ವಸ್ಥ ಸಮಾಜವು' ಏರ್ಪಟ್ಟು ಲೋಕವು ಪ್ರಸನ್ನವಾಗಿರುತ್ತದೆ.

ಪ್ರತಿಧ್ವನಿ

ದೇಶದಲ್ಲಿ ಬದಲಾವಣೆಯ ಸುಂಟರಗಾಳಿಯೆದ್ದಿದೆ. ಆ ಗಾಳಿಯಲ್ಲಿ ಅನೇಕ ಮೌಲ್ಯಗಳು ತರಗೆಲೆಯಂತೆ ಹಾರಿಹೋಗುವ ಸಂಭವ ಹೆಚ್ಚಿದೆ. ಬದಲಾವಣೆಗೊಳ್ಳುತ್ತಿರುವ ಯಾವುದೇ ವಿಷಯದ ಬಗ್ಗೆ ಜನಪದ ವಿಚಾರದ ಓದುಗರು ಪ್ರತಿಕ್ರಿಯಿಸಲು ಸಾಧ್ಯವಾಗುವಂತೆ ಈ ಅಂಕಣವನ್ನು ಪ್ರಾರಂಭಿಸಲಾಗಿದೆ. ಬರಹ ಹದಿನೈದರಿಂದ ಇಪ್ಪತ್ತು ಸಾಲುಗಳಲ್ಲಿ ಇರಲಿ. ಜಾಗೃತ ಓದುಗರು ಈ ಅಂಕಣದ ಪ್ರಯೋಜನ ಪಡೆಯಬೇಕಾಗಿ ವಿನಂತಿ. – **ಸಂಪಾದಕ**

ಸರ್ಕಾರವೇ ದೋಷಿ

ಮೂಲ - ಎಸ್.ಎನ್.ಚಾರಿ ಅನು - ಸುರೇಂದ್ರ ಕೌಲಗಿ

ಮನಸ್ಸನ್ನು ಭ್ರಮಿತಗೊಳಿಸುವಷ್ಟು ವೈರುಧ್ಯಗಳಿಂದ ಕೂಡಿದ ದೇಶ ಭಾರತ. ದೇಶದಲ್ಲಿ ಪ್ರತಿವರ್ಷ ೧೫ಸಾವಿರದಷ್ಟು ರೈತರು ಆತ್ಮಹತ್ಯೆ ಮಡಿಕೊಳ್ಳುವಂಥ ದೇಶ. ಇದು ಸಾಮಾನ್ಯ ಸಂಖ್ಯೆ. ಆತ್ಮಹತ್ಯೆಯ ಸುತ್ತ ಇರುವ ಸಾಮಾಜಿಕ ಕಳಂಕ ಮತ್ತು ನಾಚಿಕೆಗೇಡಿತನದ ಸಂಗತಿಯಿಂದ ಆತ್ಮಹತ್ಯೆಗೆ ಒಳಗಾದ ವ್ಯಕ್ತಿಯ ಕುಟುಂಬದ ಸದಸ್ಯರು ಆ ವಿಷಯವನ್ನು ಮುಚ್ಚಿಡುತ್ತಾರೆ. ೫೦ ಸಾವಿರದಿಂದ ಒಂದು ಲಕ್ಷದವರೆಗಿನಷ್ಟು ಸಣ್ಣ ಮೊತ್ತದ ಸಾಲದ ಕಾರಣದಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಇನ್ನೊಂದು ಕಡೆಗೆ ಬ್ಯಾಂಕುಗಳಲ್ಲಿರುವ ಅನುತ್ಪಾದಕ ಆಸ್ತಿ ೨೦೧೪ರಲ್ಲಿ ಮೂರು ಲಕ್ಷ ಕೋಟಿಯಷ್ಟಿತ್ತು. ಸಾರ್ವಜನಿಕ ವಲಯದಲ್ಲಿರುವ ಬ್ಯಾಂಕುಗಳು ಈ ವಿಷಯದಲ್ಲಿ ಮುಂಚೂಣಿಯಲ್ಲಿವೆ. ಈ ಅನುತ್ಪಾದಕ ಬಂಡವಾಳ ಹೂಡಿಕೆ ಕಾರ್ಪರೇಟ್ ಕಂಪನಿಗಳಿಗೆ ಹಾಗೂ ಖಾಸಗಿ ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದ್ದಾಗಿದೆ. ಈ ಅನುತ್ಪಾದಕ ಬಂಡವಾಳ ಹೂಡಿಕೆಯಲ್ಲಿ ಎಲ್ಲ ಬಗೆಯ ದುರುದ್ದೇಶಗಳಿವೆ. ಉದಾಹರಣೆಗೆ ಉದ್ದೇಶ ಪೂರ್ವಕವಾಗಿ ಸಾಲದ ಕಂತು ಕಟ್ಟದೆ ಇರುವುದು, ನಿಧಿಯನ್ನೇ ನುಂಗಿ ಹಾಕುವುದು, ಬೇರೆ ಉದ್ದೇಶಕ್ಕಾಗಿ ಹಣ ಉಪಯೋಗಿಸಿಕೊಳ್ಳುವುದು, ಅದಕ್ಷ್ಯ ಕಾರ್ಯಾಚರಣೆಯಿಂದಾಗಿ ಸಾಲ ಕಟ್ಟದೆ ಇರುವುದು ಮತ್ತು ಯೋಜನೆಗಳನ್ನು ಪ್ರಾರಂಭಿಸಲು ಹೆಚ್ಚು ಸಮಯ ಮತ್ತು ಹಣ ಬೇಡುವುದು ಇತ್ಯಾದಿಗಳು. ವ್ಯವಸಾಯ ಕ್ಷೇತ್ರದಲ್ಲಿಯ ಸಾಲ ಮರುಪಾವತಿಯ ವಿಫಲತೆ ಕೇವಲ ೧೦% ರಷ್ಟು ಇದೆ.

ಕಾರ್ಪರೇಟ್ ಕ್ಷೇತ್ರದಲ್ಲಿ ಎರಡು ಬಗೆಯ ವ್ಯವಹಾರಗಳಿವೆ. ಒಂದು ಉತ್ಪಾದಕ ಕೈಗಾರಿಕೆಗಳು, ಮತ್ತೊಂದು ಸೇವಾ ಕಂಪನಿಗಳು. ಈ ಎರಡೂ ಬಗೆಯ ಉದ್ಯಮದಲ್ಲಿ ತೊಡಗಿರುವ ಕಾರ್ಪರೇಟ್ ಕಂಪನಿಗಳನ್ನು ಓಲೈಸುವ ಕೆಲಸ ಎಲ್ಲ ಬ್ಯಾಂಕುಗಳು ಮಾಡುತ್ತವೆ. ಆದರೆ ರೈತರು ವ್ಯವಸಾಯದಿಂದಾಗುವ ಅಸಹನೀಯ ನಷ್ಟವನ್ನು ಅನುಭವಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಗಮನಿಸುವುದಿಲ್ಲ. ದೊಡ್ಡ ವಾಣಿಜ್ಯ ಸಂಸ್ಥೆಗಳು ಸಾಲ ಮರುಪಾವತಿಯಲ್ಲಿ ತಪ್ಪುಮಾಡಿದಾಗ " ಸಾಲದ ಮರು ಪಾವತಿ ವಿಧಾನದ ಪುನರ್ ಪರಿಶೀಲನೆ " ಯಂಥ ಕಸರತ್ತು ಮಾಡುತ್ತವೆ. ಅಂದರೆ ಸಾಲ ಮರುಪಾವತಿಯಲ್ಲಿ ತಪ್ಪು ಎಸಗುತ್ತಿರುವ ಕಂಪನಿಗಳಿಗೆ ತಪ್ಪಿಸಿಕೊಳ್ಳಲು

ದಾರಿಮಾಡಿಕೊಡುವುದು ಅಂತಿಮವಾಗಿ ಸಾಲಗಳು ಇಲ್ಲದಂತೆ ಮಾಡಲಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕುಗಳು ವಜಾಮಾಡಿದ ಸಾಲದ ಒಟ್ಟು ಮೊತ್ತ ೧.೬ ಲಕ್ಷ ಕೋಟಿಗಿಂತಲೂ ಮಿಗಿಲಾಗಿತ್ತು. ಇದು ನಮ್ಮ ದೇಶದ ಕಳೆದ ವರ್ಷದ ಜಿ.ಡಿ.ಪಿ ಯ ೧.೩% ರಷ್ಟಾಗಿತ್ತು.

ಬ್ಯಾಂಕುಗಳು ಈ ಅನುತ್ಪಾದಕ ಆಸ್ತಿಗಳು (N.P.A) ಬಹುವಾಗಿ ಹೆಚ್ಚಾಗುತ್ತಿದೆ. ಕಳೆದ ೨೦೧೨ರಲ್ಲಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಅನುತ್ಪಾದಕ ಆಸ್ತಿ ೧.೧೨ ಲಕ್ಷ ಕೋಟಿ ಇತ್ತು. ಅದರ ಮುಂದಿನ ಎರಡು ವರ್ಷಗಳಲ್ಲಿ ಅದು ದ್ವಿಗುಣಗೊಂಡಿತು. ೨೦೧೬ರ ಹೊತ್ತಿಗೆರ ೨೦೧೪ರಲ್ಲಿ ಇದ್ದ ಅನುತ್ಪಾದಕ ಆಸ್ತಿಗಿಂತ ಎರಡರಷ್ಟು ಆಗುವುದೆಂದು ನಿರೀಕ್ಷಿಸಲಾಗಿದೆ. ಈ ಸಂಗತಿ ನಿಜವಾಗಿಯೂ ಭಯಪಡುವಂತದ್ದು. ಬಂಡವಾಳ ಹೂಡಿಕೆಯ ತಪ್ಪು ವಿಧಾನವೂ ಆಗಿದೆ.

ಇನ್ನು ನಾವು ರೈತರ ಆತ್ಮಹತ್ಯೆಗಳನ್ನು ತಪ್ಪಿಸಲು ಉಪಯೋಗಿಸಬಹುದಾಗಿದ್ದ ಹಣದ ಬಗ್ಗೆ ಗಮನಿಸೋಣ. ರೈತ ೫೦ ಸಾವಿರ ರೂಪಾಯಿಗಳಷ್ಟು ಸಾಲ ಮಾಡಿ ಅದನ್ನು ತೀರಿಸುವ ಬಗೆ ಕಾಣದೆ ತನ್ನ ಮತ್ತು ತನ್ನ ಕುಟುಂಬದ ಉಳಿವು ಸಾಧ್ಯವಿಲ್ಲವೆಂದು ಹತಾಶೆಗೊಂಡು ಆತ್ಮಪತ್ಯೆ ಮಾಡಿಕೊಳ್ಳುತ್ತಾನೆ. ಒಂದು ವೇಳೆ ರೈತ ಸಾಯುವ ಮೊದಲೆ ಈ ಸಾಲವನ್ನು ವಜಾಮಾಡಿದ್ದರೆ ಹದಿನೈದು ಸಾವಿರ ಆತ್ಮಹತ್ಯ ಪ್ರಕರಣಗಳಿಗಾಗಿ ೫೦,೦೦೦x೧೫,೦೦೦=೭೫ ಕೋಟಿ ಪ್ರತಿ ವರ್ಷಕ್ಕೆ ಸರ್ಕಾರಕ್ಕೆ ಬೇಕಾಗುತ್ತದೆ. ಐವತ್ತು ರೈತರು ಹತಾಶೆಗೊಂಡರೆ ಒಬ್ಬ ರೈತ ಆತ್ಮಹತ್ಯೆಮಾಡಿಕೊಳ್ಳುತ್ತಾನೆ ಎಂದು ಭಾವಿಸೋಣ. ಹತಾಶೆಗೊಂಡ ಎಲ್ಲ ರೈತರನ್ನು ಸರ್ಕಾರ ಉಳಿಸಬಯಸಿದರೆ ೭೫ ಕೋಟಿx೫೦=೩,೭೫೦ ಕೋಟಿ ಹಣ ಬೇಕಾಗುತ್ತದೆ. ಈ ಮೊತ್ತ ಸಾರ್ವಜನಿಕ ವಲಯದ ಬ್ಯಾಂಕುಗಳು ಕೈಗಾರಿಕೆಗಳಿಗೆ ಕೊಟ್ಟ ವಜಾಮಾಡಿದ ಸಾಲದ ಮೊತ್ತಕ್ಕಿಂತ ಕಡಿಮೆ. ೨೦೧೩-೧೪ನೇ ಸಾಲಿನಲ್ಲಿ ಹೀಗೆ ವಜಾಮಾಡಿದ ಸಾಲದ ಮೊತ್ತ ೪೨,೫೦೦ ಕೋಟಿ ಆಗಿತ್ತು. ಕೈಗಾರಿಕೆಗಳು ಮಾಡಿದ ಸಾಲದ ವಜಾದ ಒಂದು ವರ್ಷದ ಮೊತ್ತದಲ್ಲಿ ಹತ್ತು ವರ್ಷಗಳ ಅವಧಿಯಲ್ಲಿ ರೈತರ ಜೀವವನ್ನು ಉಳಿಸಬಹುದಾಗಿತ್ತು.

ಇನ್ನೊಂದು ಮೂಲದ ಪ್ರಕಾರ ಕಳೆದ ಐದು ವರ್ಷಗಳಲ್ಲಿ ವಾಣಿಜ್ಯ ಬ್ಯಾಂಕುಗಳು ವಜಾ ಮಾಡಿದ ಸಾಲದ ಹಣದಲ್ಲಿ ೧೫ಲಕ್ಷ ಕಡುಬಡಮಕ್ಕಳಿಗೆ ಶಿಕ್ಷಣದ ಎಲ್ಲ ವೆಚ್ಚವನ್ನು ಭರಿಸುವುದರ ಮೂಲಕ ಖಾಸಗಿ ಕ್ಷೇತ್ರದಲ್ಲಿಯ ಉನ್ನತ ವಿಶ್ವವಿದ್ಯಾನಿಲಯಗಳ ಪದವೀಧರರನ್ನಾಗಿ ಮಾಡಬಹುದಾಗಿತ್ತು. ಆದರೆ ದೇಶದ ಮುಂದಿರುವ ಆದ್ಯತೆಗಳು ತಲೆಕೆಳಗಾಗಿವೆ. ಇದರರ್ಥ ಸರ್ಕಾರಗಳು ಕೃಷಿ ಸಾಲ ಕೊಡುವ ಮತ್ತು ಅದನ್ನು ವಜಾ ಮಾಡುವ ಯೋಜನೆಗಳನ್ನು ಹೊಂದಿಲ್ಲವೆಂದಾಗಲಿ ಅಲ್ಲ.

ಈ ಸಾಲಗಳು ಮತ್ತು ಅದನ್ನು ವಜಾ ಮಾಡುವುದು ವಿಶೇಷವಾಗಿ ದೊಡ್ಡ ರೈತರಿಗೆ ಮಾತ್ರ ತಲುಪುತ್ತಿವೆ. ನಮ್ಮ ದೇಶದಲ್ಲಿಯ ರೈತರ ಸಂಖ್ಯೆಯಲ್ಲಿ ೮೦%ರಷ್ಟು ರೈತರು ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿದ್ದಾರೆ. "ಕೃಷಿ ಸಾಲ ಎಂಬುದನ್ನೇ ಸರಿಯಾದ ಶಬ್ದಗಳಲ್ಲಿ ವ್ಯಾಖ್ಯಾನಿಸಿಲ್ಲ". ಆದ್ದರಿಂದ ವ್ಯವಸಾಯಕ್ಕೆ ನೇರವಾಗಿ ಸಂಬಂಧಿಸಿಲ್ಲದ ಯೋಜನೆಗಳಿಗೆ ಸಾಲಗಳು ಮಂಜೂರಾಗುತ್ತವೆ.

ಸ್ಥಳೀಯವಾಗಿರುವ ಭ್ರಷ್ಟಾಚಾರದಿಂದಾಗಿ ಯಾರು ಲಂಚ ಕೊಡುತ್ತಾರೊ ಅಂಥವರಿಗೆ ಮಾತ್ರ ಸಾಲ ಸಿಗುತ್ತದೆ. ಉದಾಹರಣೆಗೆ ಗ್ರಾಮ ಪಂಚಾಯಿತಿಯ ಅಧ್ಯಕ್ಷ ರಾಜಕೀಯ ವ್ಯಕ್ತಿಯಾಗಿರುವುದರಿಂದ ಸಾಲ ಪಡೆಯುವವ ಮತ್ತು ಸಾಲ ಕೊಡುವ ವ್ಯಕ್ತಿಗಳ ಮಧ್ಯೆ ದಲ್ಲಾಳಿಯಾಗಿ ಕೆಲಸ ಮಾಡುತ್ತಾನೆ.

ಹತಾಶರಾಗಿರುವ ರೈತರ ಸಾಲ ಮನ್ನಾ ಮಾಡುವುದು ಸರಿಯಾದ ಕ್ರಮವಾಗಿದ್ದರೂ ಕೂಡ ಸರ್ಕಾರ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕು. ರೈತರ ಸಂಕಷ್ಟ ಹಲವಾರು ಕಾರಣಗಳಿಂದ ಆಗುತ್ತದೆ. ಉದಾಹರಣೆಗೆ ಭೂಮಿಯ ಫಲವತ್ತತೆ ಕ್ಷೀಣಿಸುತ್ತಾ ಹೋಗುವುದು, ತಪ್ಪಾಗಿ ಬೆಳೆಯನ್ನು ಬೆಳೆಯುವುದು, ಕ್ಷೇತ್ರಮಟ್ಟದಲ್ಲಿ ರೈತರಿಗೆ ಶಿಕ್ಷಣ ಸಿಗದಿರುವುದು, ನೀರಾವರಿ ತಂತ್ರಜ್ಞಾನ ಅಥವಾ ಇತರ ಕೃಷಿ ಕ್ಷೇತ್ರಗಳಲ್ಲಿಯ ತಂತ್ರಜ್ಞಾನದ ಬಗ್ಗೆ ಇರುವ ಅಜ್ಞಾನ ಮತ್ತು ಅವರ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ಇಲ್ಲದೆ ಇರುವುದು ಇತ್ಯಾದಿ.

ಬಡ ರೈತರಿಗೆ ಕೊಡಲಾಗುವ ಕೃಷಿ ಸಾಲ ಕೇವಲ ಕಾಗದದ ಮೇಲೆ ಇರುವಂತೆ ಕಾಣುತ್ತದೆ. ಇಂದಿಗೂ ಬಡ ರೈತ ಹಳ್ಳಿಯಲ್ಲಿರುವ ಲೇವಾದೇವಿಗಾರನ ಬಳಿಯೇ ಸಾಲ ಪಡೆಯುತ್ತಾರೆ. ಅವನು ಅತಿಯಾದ ಬಡ್ಡಿ ವಸೂಲಿ ಮಾಡುತ್ತಾನೆ. ಬ್ಯಾಂಕುಗಳು ಹಳ್ಳಿಗಳನ್ನು ತಲುಪಿರಬಹುದು ಅದು ಕಾಗದದ ಮೇಲೆ ಮಾತ್ರ. ಬ್ಯಾಂಕುಗಳು ನಿಜವಾಗಿಯೂ ಗ್ರಾಮೀನ ಪ್ರದೇಶವನ್ನು ತಲುಪಿದ್ದರೆ ಇಷ್ಟೊಂದು ಬಡ ರೈತರ ಜೀವನ ಕಳೆದು ಹೋಗುತ್ತಿರಲಿಲ್ಲ. ಈ ವಿಷಯವಾಗಿ ಬ್ಯಾಂಕುಗಳನ್ನು ಪೂರ್ತಿ ದೂಷಿಸುವಂತಿಲ್ಲ. ಏಕೆಂದರೆ ಬ್ಯಾಂಕುಗಳ ಹಣ ಮಂಜೂರಾತಿ ನೀತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಚನೆಯ ಅನುಸಾರವಾಗಿ ಇರುತ್ತದೆ.

ಸರ್ಕಾರಗಳು ಕೈಗಾರಿಕಾ ಬೆಳವಣಿಗೆಗೆ ಪ್ರಾಮುಖ್ಯತೆ ಕೊಟ್ಟಲ್ಲಿ ಬ್ಯಾಂಕುಗಳೂ ಕೂಡ ಅದನ್ನೇ ಅನುಸರಿಸುತ್ತವೆ. ಬ್ಯಾಂಕುಗಳು ಕೊಡಮಾಡುವ ಸಾಲ ಅತ್ಯಂತ ಕಡು ಬಡವರ ತನಕ ತಲುಪುವುದೇ ಇಲ್ಲ. ಮಳೆಯೂ ಬರದೆ ಹೋದಾಗ ಹನಿ ಹನಿಯಾಗಿ ರೈತರಿಗೆ ತಲುಪಬೇಕಾದ ಹಣ ತಲುಪದೆ ಅತ್ಯಂತ ಕಡು ಬಡವ ರೈತನ ಶರೀರಲ್ಲಿಯ ರಕ್ತದ ಕೊನೆ ಹನಿಯೂ ಇಲ್ಲದಾಗುತ್ತದೆ.

ಇಬ್ಬರು ಯುವಕರ ಗಾಂಧಿ ಕುರಿತ ಚಿಂತನೆಗಳು

ಗಾಂಧಿ ಸದಾ ಪ್ರಸ್ತುತ

ಗಾಂಧೀಜಿಯವರ ಚಿಂತನೆ ಆಧುನಿಕ ಕಾಲದಲ್ಲಿ ಅತ್ಯಂತ ಪ್ರಸ್ತುತವಾಗಿದೆ. ಅವರ ಕ್ರಿಯಾಶೀಲ ಚಿಂತನೆಗಳನ್ನು ಇಡೀ ವಿಶ್ವವೇ ಮೆಚ್ಚಿಕೊಂಡಿದೆ. ಗಾಂಧೀಜಿಯವರ ಚಿಂತನೆಗಳು ವಿಶಾಲಾತ್ಮಕವಾಗಿರುವುದರಿಂದ ಅವುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಯೋಗಿಲು ಸಾಧ್ಯ. ಇಲ್ಲಿ ಮುಖ್ಯವಾಗಿ ಮಾನವೀಯ ಮೌಲ್ಯಗಳ ಬಗ್ಗೆ ಬೆಳಕು ಚೆಲ್ಲಿದಾಗ ಭಾರತದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು, ಮಹಾತ್ಮರು ಅಪ್ರತಿಮ ಪಾತ್ರ ವಹಿಸಿರುತ್ತಾರೆ. ಹಳಸಿ ಹೋದ ಮೌಲ್ಯಗಳನ್ನು ಕುರುಡು ಸಂಪ್ರದಾಯಗಳನ್ನು, ದುಷ್ಟಕಟ್ಟಳೆಗಳನ್ನು, ಸಾಮಾಜಿಕ ಪಿಡುಗುಗಳನ್ನು ಗುರುತಿಸಿ ಅವುಗಳನ್ನು ತೊಡೆದು ಹಾಕಲು ಕಂಕಣಬದ್ಧರಾದವರು ಮಹಾತ್ಮರು, ಸಂತರು, ಸುಧಾರಕರು. ಈ ಪಂಕ್ತಿಯಲ್ಲಿ ಪ್ರಮುಖವಾಗಿ ಗುರುತಿಸಲ್ಪಟ್ಟವರು ರಾಷ್ಟ್ರಪತಿ ಮಹಾತ್ಮ ಗಾಂಧೀಜಿ. ತಾವು ಕಂಡ ಸತ್ಯವನ್ನು, ತಾವು ಒಪ್ಪಿದ ಹೊಸ ಮೌಲ್ಯಗಳನ್ನು, ವಿಚಾರಧಾರೆಗಳನ್ನು ತಮ್ಮ ಜೀವನದಲ್ಲಿ ಮೊದಲು ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತರಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗವಾಗಿದೆ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದು ಕಂಡರೂ ಇದರ ಫಲ ಶಾಶ್ವತ. ಇದರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ. ಈ ರೀತಿಯ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೇ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ. ಪರಿವರ್ತನೆಯ ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿ ದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚು ಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅವುಗಳನ್ನು ಅನುಸರಿಸಿದಾಗ ಅವರ ಜೀವನ ಕ್ರಮದಲ್ಲಿ, ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತಿತವಾಗುತ್ತದೆ.

ಮನುಷ್ಯನು ಬದುಕಿದರೆ ಮೌಲ್ಯಗಳಿಗೋಸ್ಕರ ಬದುಕಬೇಕು. ಮೌಲ್ಯಗಳು ಇಲ್ಲದ ಜೀವನವು ಜೀವನವೇ ಅಲ್ಲ. ಮನುಷ್ಯ ಯಾರೇ ಇರಲಿ, ತನ್ನ ಬದುಕಿನಲ್ಲಿ ಬೆಲೆಕೊಟ್ಟು ಆಚರಿಸಿಕೊಂಡು ಹೋಗಬೇಕಾದ ಮೌಲ್ಯಗಳು ಶಾಶ್ವತ ಮೌಲ್ಯಗಳು ಇದ್ದೇ ಇವೆ. ಆ ಮೌಲ್ಯಗಳ ಪ್ರಶ್ನೆ ಬಂದರೆ ಮನುಷ್ಯ ಯಾರೊಂದಿಗೂ ಯಾವುದಾದರೊಂದಿಗೂ ಸಂಧಾನ ಮಾಡಿಕೊಳ್ಳಬಾರದು. ತಾನು ಒಬ್ಬನೇ ಆದರೂ ಚಿಂತೆ ಇಲ್ಲ. ಮನುಷ್ಯನು ತಾನು ನಂಬಿದ ಮೌಲ್ಯಗಳಿಗೆ ಅಂಟಿ ನಿಲ್ಲಬೇಕು. "ಮೌಲ್ಯಗಳು

ಇಲ್ಲದ ಮನುಷ್ಯ ಕಳೆದು ಹೋಗುವಂತೆ, ಮೌಲ್ಯಗಳು ಇರುವ ಮನುಷ್ಯ ಎಂದೂ ಕಳೆದು ಹೋಗುವುದಿಲ್ಲ."ಮನುಷ್ಯನು ಮಾಡುವ ಕಾರ್ಯಗಳಿಗೆ ಅವನು ನಂಬಿದ ಮೌಲ್ಯಗಳಿಂದಲೇ ಪ್ರೇರಣೆ ಲಭಿಸಬೇಕು. ಮನುಷ್ಯನು ಅನುಭವಿಸುವ ಸುಖ ದುಃಖಗಳೇನೇ ಇದ್ದರೂ, ಅವು ಅವನು ಮಾಡುವ ಕೆಲಸದಿಂದಲೇ ಚಿಮ್ಮಿ ಬರುತ್ತವೆ. ಜೀವನವು ಕೇವಲ ಮೌಲ್ಯಗಳನ್ನು ಹೇಳುವುದರಲ್ಲಿ ಇಲ್ಲ. ಆ ಮೌಲ್ಯಗಳನ್ನು ಆಚರಣೆಗೆ ತರುವುದರಲ್ಲಿ ಇದೆ. ಮನುಷ್ಯನು ಮೌಲ್ಯಗಳನ್ನು ತಿಳಿದರೆ ಸಾಲದು, ಅವುಗಳನ್ನು ನಂಬಬೇಕು, ಪ್ರೀತಿಸಬೇಕು, ಪ್ರತ್ಯಕ್ಷ ಮಾಡಿ ತೋರಿಸಬೇಕು ಎಂದಿದ್ದಾರೆ ಮಹಾತ್ಮ ಗಾಂಧೀಜಿ.

ಗಾಂಧೀಜಿಯವರು ನಡೆಸಿದ ಪ್ರಯೋಗಗಳು ಬಳಸಿದ ಸತ್ಯ, ಅಹಿಂಸೆ, ವಿಚಾರಧಾರೆಗಳು, ಪರಿಕರಗಳು, ಮೌಲ್ಯಗಳು ಜಾಗತಿಕ ಇತಿಹಾಸದ ಉಜ್ವಲ ಮಾದರಿಗಳು. ಕಾಲದ ಅಗ್ನಿ ಪರೀಕ್ಷೆಗೆ ಮತ್ತೆ-ಮತ್ತೆ ಒಳಗಾಗಿ ತನ್ನ ಹೊಳಪು ಹೆಚ್ಚಿಸಿಕೊಳ್ಳುತ್ತಿರುವ ಇವರ ವಿಚಾರಧಾರೆಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತವೆ.

– ಎಂ.ಡಿ.ಉಮೇಶ್

****

ಕೃತಜ್ಞತೆ ಅರ್ಪಿಸಬೇಕಾದ ಬಗೆ

ಮಹಾತ್ಮ ಗಾಂಧೀಜಿಯ ಹೆಸರು ಕಿವಿಗೆಬಿದ್ದರೆ ಸಾಕು ಮೈಮನವೇ ರೋಮಾಂಚನಗೊಳ್ಳುತ್ತದೆ. ಕಾರಣ ಅವರು ಅಹಿಂಸೆ ಮಾರ್ಗದಲ್ಲಿ ಭಾರತ ಮಾತೆಗೆ ಸ್ವಾತಂತ್ರ್ಯ ತಂದು ಕೊಟ್ಟದ್ದು ಮಾತ್ರವಲ್ಲ. ಮನುಜ ಕುಲ ಈ ಭೂಮಿಯ ಮೇಲೆ ಜೀವಂತವಾಗಿರುವ ತನಕ – ನೆಮ್ಮದಿಯಾಗಿ ಸುಖ ಸಂತೋಷವಾಗಿ ಬಾಳುವಂತಹ ಅಮೂಲ್ಯ ಕಾಣಿಕೆಗಳನ್ನು ಕೊಟ್ಟು ಹೋಗಿದ್ದಾರೆ ಅವುಗಳು ಯಾವುವೆಂದರೆ ಸತ್ಯ – ಅಹಿಂಸೆ – ಪ್ರಾಮಾಣಿಕತೆ – ಮಾನವೀಯತೆಗಳಂತಹ ಮೇರುಗುಣಗಳನ್ನು ಅವರ ಜೀವನದಲ್ಲಿ ಅಳವಡಿಸಿಕೊಂಡು ಇವುಗಳಲ್ಲೇ ಉಸಿರಾಡಿ ಜೀವನಸಾಗಿಸಿ ಅದ್ಭುತವಾಗಿ ಜಯಗಳಿಸಿ ಲೋಕಮಾನ್ಯರಾಗಿ ನಮ್ಮನ್ನು ಅಗಲಿದ್ದಾರೆ. ಅವರು ಜೀವನವನ್ನೇ ಸಂದೇಶವಾಗಿ ರೂಪಿಸಿ, ಅವರು ಸಂದೇಶಗಳ ಮೂಲಕವೇ ನಮ್ಮ ಜೊತೆಯಲ್ಲಿ ಅದೃಶ್ಯವಾಗಿದ್ದುಕೊಂಡೆ ನಮ್ಮನ್ನು ಪ್ರೀತಿಯಿಂದ ಹಾರೈಸುತ್ತಿದ್ದಾರೆ. ಪ್ರಸ್ತುತ ಈ ಆಧುನಿಕ ಶತಮಾನದಲ್ಲಿ ನಾವು ಅವರು ನಮಗೆ ನೀಡಿರುವ ಸತ್ಯ ಅಹಿಂಸೆ – ಪ್ರಾಮಾಣಿಕತೆ – ಮಾನವೀಯತೆಗಳಂತಹ ಮುತ್ತು ರತ್ನಗಳನ್ನು ಜೋಪಾನವಾಗಿ ಕಾಪಾಡಬೇಕಾದಂತಹ ಜವಾಬ್ದಾರಿ ನಮ್ಮ ಹೆಗಲ ಮೇಲಿದೆ. ಈ ಅಮೂಲ್ಯ ಗುಣಗಳನ್ನು ನಾವುಗಳು ಅಳವಡಿಸಿಕೊಂಡು ನಮ್ಮ ಮುಂದಿನ ತಲೆಮಾರಿಗೆ ವರ್ಗಾಯಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಾಗಿದೆ. ಆದ್ದರಿಂದ ನಾವುಗಳು ತುಂಬಾ ಸಹನೆಯಿಂದ ಈ ಗುಣಗಳನ್ನು ನಮ್ಮ ಸಂತತಿಗೆ ತಲುಪಿಸಿ ಮಹಾತ್ಮನಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಪ್ರತಿಯೊಂದು ಕುಟುಂಬಗಳಲ್ಲೂ ಕೂಡ ಮಹಾತ್ಮನ ಜೀವನ ಶೈಲಿಯನ್ನು ಅಳವಡಿಸಿಕೊಂಡು ಸಂತೃಪ್ತ ಜೀವನ ನಡೆಸಿದಾಗ ಮಾತ್ರ ಮಾಹಾತ್ಮನ ಆತ್ಮಕ್ಕೆ ಚಿರಶಾಂತಿ ದೊರೆಯುತ್ತದೆ.

– ಹೆಚ್.ಕೆ.ರಾಜೇಶ್

ಗಾಂಧಿ ಮತ್ತು ಸಾರ್ವಜನಿಕ ಹಣ
ತನ್ನನ್ನು ತಾನೇ ರಕ್ಷಿಸಿಕೊಂಡ ಗಾಂಧಿ

– ಜಿ.ಎಸ್.ಜಯದೇವ್

ಒಮ್ಮೆ ಗಾಂಧೀಜಿ ಸಾರ್ವಜನಿಕ ಹಣವನ್ನು ವೈಯುಕ್ತಿಕ ಕಾರಣಕ್ಕಾಗಿ ಬಳಸಿ, ತಳಮಳಕ್ಕೆ ಸಿಕ್ಕಿಕೊಂಡ ಘಟನೆ ಸ್ವಯಂಸೇವೆ ಮಾಡು ಎಲ್ಲರಿಗೂ ಒಂದು ಒಳ್ಳೆಯ ಪಾಠ. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ "ನೇಟಾಲ್ ಇಂಡಿಯನ್ ಕಾಂಗ್ರೆಸ್" ಸಂಸ್ಥೆಯನ್ನು ಹುಟ್ಟು ಹಾಕಿ ಬೆಳೆಸುತ್ತಿದ್ದರು. ಈ ಸಂಸ್ಥೆಯ ಬ್ಯಾಂಕ್ ಅಕೌಂಟ್‌ನಲ್ಲಿ ಸಾರ್ವಜನಿಕರ ಹಣ ಇತ್ತು. ಅದು ಗಾಂಧೀಜಿಯವರ ನಿಯಂತ್ರಣದಲ್ಲೇ ಇತ್ತು. ಈ ಸಂದರ್ಭದಲ್ಲಿ ಗಾಂಧೀಜಿಯ ಸ್ನೇಹಿತನೊಬ್ಬ ಅವರ ಬಳಿ ಬಂದು, ತುರ್ತಾಗಿ ತನಗೆ ೩೦೦ ಪೌಂಡ್ ಹಣಬೇಕೆಂದು, ಬಹಳ ಬೇಗ ಹಿಂದಿರುಗಿಸುವುದಾಗಿ ಬೇಡಿದನು. ಗಾಂಧೀಜಿಯವರ ಬಳಿ ಅಷ್ಟು ಹಣ ಇರಲಿಲ್ಲ. ಆದರೆ ಅವನ ಪರಿಸ್ಥಿತಿ ನೋಡಿ ಗಾಂಧೀಜಿ ಮರುಕಪಟ್ಟರು. ಹಿಂದು-ಮುಂದು ನೋಡದೆ "ನೇಟಾಲ್ ಕಾಂಗ್ರೆಸ್" ಖಾತೆಯ ಚೆಕ್ ಬುಕ್ ತೆಗೆದುಕೊಂಡು ೩೦೦ ಪೌಂಡ್‌ನ ಚೆಕ್ ಬರೆದುಕೊಟ್ಟರು. ಬಹಳ ಬೇಗ ಹಿಂತಿರುಗಿಸುವುದಾಗಿ ಹೇಳಿ ಅವರ ಸ್ನೇಹಿತ ಹಣ ತೆಗೆದುಕೊಂಡು ಹೊರಟುಹೋದ.

ಘಟನೆಯಾದ ಸ್ವಲ್ಪ ಸಮಯದ ನಂತರ ಗಾಂಧೀಜಿಗೆ ತಮ್ಮ ತಪ್ಪಿನ ಅರಿವಾಗತೊಡಗಿತು. ಹೀಗೆ ಸಾರ್ವಜನಿಕ ಹಣವನ್ನು ವೈಯುಕ್ತಿಕ ಉದ್ದೇಶಕ್ಕಾಗಿ ಬಳಸಿದ್ದು ಸರಿ ಎನಿಸಲಿಲ್ಲ. ಇದೊಂದು ತಾತ್ಕಾಲಿಕ ಹೊಂದಾಣಿಕೆಯ ವಿಷಯ; ಆದರೂ ಸಾರ್ವಜನಿಕರ ಹಣವನ್ನು ಯಾವ ಸಂದರ್ಭದಲ್ಲೂ ಹೀಗೆ ವೈಯುಕ್ತಿಕ ಕಾರಣಕ್ಕೆ ಬಳಸಬಾರದೆಂದು ಅವರ ಒಳ ಮನಸ್ಸು ಹೇಳುತ್ತಿತ್ತು. ತಾವು ಇನ್ನು ಮುಂದೆ ಎಂದೆಂದೂ ಹೀಗೆ ಮಾಡುವುದಿಲ್ಲ ಎಂದು ದೃಢ ನಿರ್ಧಾರ ಮಾಡಿದರು.


ಸಾಲ ತೆಗೆದುಕೊಂಡು ಹೋದ ಸ್ನೇಹಿತನಿಗಾಗಿ ಕಾಯುವ ವ್ಯವಧಾನ ಗಾಂಧೀಜಿಗೆ ಇರಲಿಲ್ಲ. ಅವರ ಮನಸ್ಸು ಈಗಾಗಲೇ ಕಳವಳಗೊಂಡು ತಕ್ಷಣವೇ ಹಣವನ್ನು ಖಾತೆಗೆ ಮರಳಿ ಜಮಾ ಮಾಡಬೇಕೆಂದು ತವಕಿಸುತ್ತಿತ್ತು. ಆದರೆ ಅಷ್ಟೊಂದು ಹಣ ತರುವುದಾದರೂ ಎಲ್ಲಿಂದ? ಇದೇ ಸಮಯದಲ್ಲಿ ಅವರಿಗೆ ಒಂದು ಟೆಲಿಗ್ರಾಂ ಬಂತು. ಏನೆಂದರೆ ೬೦ ಜನ ಭಾರತೀಯರು ಟ್ರಾನ್ಸಾಲ್-ನೇಟಾಲ್ ಗಡಿ ದಾಟಿದರು ಎಂದು ಪೋಲಿಸರು ಅವರನ್ನು ಬಂಧಿಸಿ ಕೇಸು ಹಾಕಿದ್ದರು. ಗಾಂಧೀಜಿ ತಕ್ಷಣ

ಸ್ಥಳಕ್ಕೆ ಧಾವಿಸಿದರು. ಇವರ್ಯಾರೂ ಏನೂ ಅಪರಾಧ ಮಾಡಿರಲಿಲ್ಲ; ಇವರೆಲ್ಲಾ ನಿರಕ್ಷರ ಕುಕ್ಷಿಗಳು, ತಾವು ಅಪರಾಧಿಗಳಲ್ಲ ಎಂದು ಸಮರ್ಥಿಸಿಕೊಳ್ಳಲು ಇವರಿಗೆ ಸಾಧ್ಯವಾಗಿರಲಿಲ್ಲ ಅಷ್ಟೆ. ಗಾಂಧೀಜಿ ಇವರನ್ನೆಲ್ಲಾ ಒಟ್ಟು ಸೇರಿಸಿ ತಾವು ಅವರನ್ನು ಬಿಡಿಸುವುದಾಗಿಯೂ ಮತ್ತು ಅದಕ್ಕೆ ತಲಾ ಮೂರು ಪೌಂಡ್ ಫೀಸು ಕೊಡಬೇಕೆಂದು ಹೇಳಿದರು. ಈ ಭಾರತೀಯರು ಸಂತೋಷದಿಂದ ಒಪ್ಪಿಕೊಂಡರು. ಗಾಂಧೀಜಿ ಕೋರ್ಟಿಗೆ ಹೇಳಿಕೆ ಸಲ್ಲಿಸಿ ಅವರನ್ನೆಲ್ಲಾ ಬಿಡಿಸಿದರು. ನಂತರ ಬಂದ ಹಣವನ್ನು ತಂದು "ಇಂಡಿಯನ್ ನೇಟಾಲ್ ಕಾಂಗ್ರೆಸ್" ಖಾತೆಗೆ ಜಮಾ ಮಾಡಿದರು.

ಅದು ೧೯೨೧ರ ಸಮಯ ವಿಜಯವಾಡದಲ್ಲಿ ನಡೆದ ಘಟನೆ ಹೀಗಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ ವಿಜಯವಾಡದಲ್ಲಿ ನಡೆಯಿತು. ಇದಾದ ನಂತರ ಗಾಂಧೀಜಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವವರಿದ್ದರು. ಎತ್ತರವಾದ ಮಣ್ಣು ಪೇರಿಸಿದ ವೇದಿಕೆಯ ಮೇಲೆ ಮರದ ಕಂಬಗಳನ್ನು ನೆಟ್ಟು ಛಾವಣಿ ಹೊದಿಸಿದ್ದರು. ಈ ವೇದಿಕೆಯಲ್ಲಿ ಕುಳಿತು ಗಾಂಧೀಜಿ ತಮ್ಮ ಭಾಷಣ ಆರಂಬಿಸಿದರು. ಆ ಕಾಲದಲ್ಲಿ ಬಹುಶಹ ಮೈಕ್‌ಗಳು ಇರಲಿಲ್ಲ. ಗಾಂಧೀಜಿಯ ಕ್ಷೀಣ ಧ್ವನಿ ಹಿಂದೆ ನಿಂತವರಿಗೆ ಕೇಳಿಸುತ್ತಿರಲಿಲ್ಲ. ನೆರೆದ ಜನಸ್ತೋಮ ಗಾಂಧೀಜಿಯ ಮಾತುಗಳನ್ನು ಆಲಿಸುವುದಕ್ಕಿಂತ ಅವರ ದರ್ಶನಾಭಿಲಾಷಿಗಳಾಗಿ ಸೇರಿದ್ದರು. ತುಂಬಿ ನೆರೆದಿದ್ದ ಆ ಜನಸ್ತೋಮದ ನಡುವೆ ಮದವೇರಿದ ಗೂಳಿಯೊಂದು ನುಗ್ಗಿಬಿಟ್ಟಿತು. ಇದರಿಂದ ಚೆಲ್ಲಾ ಪಿಲ್ಲಿಯಾದ ಜನ ವೇದಿಕೆಯ ಕಡೆಗೂ ನುಗ್ಗಿದರು. ಈ ನುಗ್ಗಾಟ–ಭಾರಾಟದಿಂದಾಗಿ ವೇದಿಕೆಯ ಮರದ ಕಂಬಗಳು ಜೊತೆಗೆ ಹಾಕಿದ್ದ ಛಾವಣಿ ಮುರಿದು ಇನ್ನೇನು ಗಾಂಧೀಜಿಯ ಮೇಲೆ ಬೀಳುವುದರಲ್ಲಿತ್ತು. ಆತಂಕಗೊಂಡ ಕಾರ್ಯಕರ್ತರು ನಿಸ್ಸಹಾಯಕರಾಗಿ ದಿಕ್ಕು ತೋಚದೆ ನಿಂತಿದ್ದರು. ಆಗಬಹುದಾದ ಅವಘಡವನ್ನು ಮನಗಂಡ ಗಾಂಧೀಜಿ ಛಂಗನೆ ತಮ್ಮ ಸ್ಥಳದಿಂದ ನೆಗೆದು ಮತ್ತೊಂದು ಕುರ್ಚಿಗೆ ಜಿಗಿದರು. ಆ ಕುರ್ಚಿಯಿಂದ ಮತ್ತೊಂದು ಕುರ್ಚಿಗೂ ಜಿಗಿದರು. ಹೀಗೆ ಕುರ್ಚಿಯಿಂದ ಕುರ್ಚಿಗೆ ನೆಗೆದು ಕೊನೆಗೆ ವಿರಳವಾದ ಜನಸಂದಣಿ ಇರುವೆಡೆಗೆ ತಲುಪಿದರು. ಅಲ್ಲೇ ಇದ್ದ ಯಾವುದೋ ವಾಹನವನ್ನು ಏರಿ ತಮ್ಮ ನಿವಾಸಕ್ಕೆ ಹಿಂದಿರುಗಿ ಏನೂ ಘಟಿಸಲಿಲ್ಲವೇನೊ ಎಂಬಂತೆ ತಮ್ಮ ಪತ್ರವ್ಯವಹಾರ ಇತ್ಯಾದಿ ಕಾರ್ಯಗಳಲ್ಲಿ ತೊಡಗಿದರು. ದಿಕ್ಕುಗಾಣದೆ ಕಂಗಾಲಾದ ಕಾರ್ಯಕರ್ತರು ಹಿಂದಿರುಗಿ ಬಂದು ನೋಡುತ್ತಾರೆ ಗಾಂಧೀಜಿ ಯಥಾಸ್ಥಾನದಲ್ಲಿ ಕುಳಿತು ಅವರ ಪಾಡಿಗೆ ಅವರು ಕೆಲಸದಲ್ಲಿ ಮಗ್ನರಾಗಿದ್ದಾರೆ.



ಅಂಬೇಡ್ಕರ್ ಮತ್ತು ಗಾಂಧಿ



– ಸುರೇಂದ್ರ ಕೌಲಗಿ

(ಗಾಂಧಿ ನಿಜಕ್ಕೂ ಮಹಾತ್ಮರೇ? ಎಂಬ ಅಂಬೇಡ್ಕರರ ಪ್ರಶ್ನೆಗೆ ಅವರೇ ಕೊಟ್ಟ ಉತ್ತರದಲ್ಲಿ ಮಹಾತ್ಮಗಾಂಧೀಜಿಯವರ ಬಗ್ಗೆ ಬರೆದ ಅಭಿಪ್ರಾಯಗಳು ಈ ರೀತಿ ಇವೆ : ವೇಷ ಬದಲಿಸಿ ಮಹಾತ್ಮರಾಗುವುದು ಭಾರತದಲ್ಲಿ ಸುಲಭ; ಸತ್ಯ ಮತ್ತು ಅಹಿಂಸೆಯ ವಿಷಯದ ಮೂಲ ಕ್ರೆಡಿಟನ್ನು ಬುದ್ಧಿಗೇಡಿಗಳನ್ನು ಹೊರತುಪಡಿಸಿ ಮತ್ತಾರೂ ಕೂಡ ಗಾಂಧಿಯವರಿಗೆ ನೀಡಲಾರರು; ಸತ್ಯ ಮತ್ತು ಅಹಿಂಸೆಯಂಥಹ ತತ್ವಗಳನ್ನು ಬೋಧಿಸಿದ್ದನ್ನು ಅಧ್ಯಯನ ಮಾಡಿದರೆ ಗಾಂಧಿಯವರು ಬೇರೆಯವರ ಬಂಡವಾಳದಲ್ಲಿ ವ್ಯಾಪಾರ ಮಾಡುತ್ತಾರೆ. ವಿಷಯ ಗಂಭೀರತೆ ಅಥವಾ ಪ್ರಾಮಾಣಿಕತೆಗಿಂತ ಕಪಟತನವೆ ಹೆಚ್ಚಿದೆ; ಗಾಂಧಿಯವರ ಕ್ರಿಯೆಗಳನ್ನು ನಕಲಿ ನಾಣ್ಯಗಳಿಗೆ ಹೋಲಿಸಬಹುದು; ಗಾಂಧಿ ತಮ್ಮ ಸಹಜ ಧೂರ್ತ ಬುದ್ಧಿ ಮತ್ತು ಮೋಸಮಾಡುವ ಗುಣದಿಂದ ಅವರು ತಮ್ಮನ್ನು ತಾವೇ ಮುಂಚೂಣಿಯಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ; ವಿಶ್ವಾಸಘಾತುಕತನ ಮತ್ತು ವಂಚನೆ ದುರ್ಬಲ ಮನಸ್ಸಿನವರ ಆಯುಧಗಳು, ಗಾಂಧಿ ಸದಾ ಈ ಆಯುಧಗಳನ್ನು ಬಳಸಿದ್ದಾರೆ. ಕ್ಷುಲ್ಲಕ ರಾಜಕಾರಣಿಯಂತೆ ನಿಧಿ ಸಂಗ್ರಹಕ್ಕಾಗಿ ಗೋಪಾಲಕೃಷ್ಣಗೋಖಲೆಯವರ ನಾಯಕತ್ವವನ್ನು ಬಿಟ್ಟು ತಿಲಕರನ್ನು ಹೊಗಳಲಾರಂಭಿಸಿದರು. ಗಾಂಧಿ ಕ್ರಿಶ್ಚಿಯನ್ ಧರ್ಮದ ಉಗ್ರ ವಿರೋಧಿಯಾಗಿದ್ದರು; ಪಾಶ್ಚಿಮಾತ್ಯ ಪ್ರಪಂಚ ಮೆಚ್ಚಿಸಲು ಬೈಬಲನ್ನು ಉಲ್ಲೇಖಿಸುತ್ತಿದ್ದರು. ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಗಾಂಧಿ ದಲಿತರ ವಿರುದ್ಧ ಮುಸ್ಲಿಮರನ್ನು ಎತ್ತಿ ಕಟ್ಟಿ ಬ್ಲಾಕ್‌ಮೇಲ್ ಮಾಡಿದ್ದಾರೆ. ಬಾಯಲ್ಲಿ ದೇವರ ಹೆಸರು, ಕಂಕುಳಲ್ಲಿ ಕತ್ತಿ ಇಟ್ಟುಕೊಳ್ಳುವ ವ್ಯಕ್ತಿಯನ್ನು ಮಹಾತ್ಮ ಎಂದು ಕರೆಯುವುದಾದರೆ ಖಂಡಿತ ಗಾಂಧಿಯನ್ನು ಕರೆಯಿರಿ. ನನ್ನ ಪ್ರಕಾರ ಅವರು ಕೇವಲ ಮೋಹನದಾಸ್ ಕರಮಚಂದ ಗಾಂಧಿಯಷ್ಟೇ. ಡಾ?ಅಂಬೇಡ್ಕರರು ಗಾಂಧಿಯವರ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಸಮಜಾಯಿಶಿ ಕೊಡುವ ಪ್ರಯತ್ನವಾಗಿ ಈ ಲೇಖನ. ಡಾ?ಅಂಬೇಡ್ಕರರ ಮೂಲ ಇಂಗ್ಲೀಷ್ ಲೇಖನದ ಕನ್ನಡ ಅನುವಾದ ಗೌರಿ ಲಂಕೇಶ್ ಪತ್ರಿಕೆಯಲ್ಲಿ ೬ಮೇ ೨೦೧೫ರಂದು ಪ್ರಕಟವಾಗಿದೆ – ಸಂ)

ಮೇ ೬, ೨೦೧೫ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ “ಗಾಂಧೀ ನಿಜಕ್ಕೂ ಮಹಾತ್ಮರೇ? ಎಂಬ ಅಂಬೇಡ್ಕರರ ಪ್ರಶ್ನೆ, ಮತ್ತವರ ಉತ್ತರ” ಎಂಬ ಲೇಖನ ಓದಿದೆ. ಈ ಲೇಖನವನ್ನು ರಘೋತ್ತಮ ಹೊ.ಬ ಎಂಬುವರು ಪರಿಚಯಿಸಿದ್ದಾರೆ. ಗಾಂಧಿಯುವರ ಸಮಕಾಲೀನರೂ, ದಲಿತರ ಏಳಿಗೆಗಾಗಿ ಕೆಲಸಮಾಡಿದ ಸಹನಾಯಕರೂ ಆಗಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರರು ಗಾಂಧೀಜಿಯವರ

ವ್ಯಕ್ತಿತ್ವ ಮತ್ತು ವಿಚಾರಗಳ ಬಗ್ಗೆ ಸಾಕಷ್ಟು ಅಸಂತೋಷ ಹೊಂದಿದ್ದರೆಂಬ ಸಂಗತಿ ಪರಿಚಯಾತ್ಮಕವಾದ ಈ ಲೇಖನದಿಂದ ಗೊತ್ತಾಗುತ್ತದೆ. ಡಾ.ಅಂಬೇಡ್ಕರರ ಬುದ್ಧಿಮತ್ತೆಯನ್ನು ಪ್ರಶ್ನಿಸುವ ಯೋಗ್ಯತೆ ನನಗಿಲ್ಲ. ಗಾಂಧಿಯವರ ಬಗ್ಗೆ ಅವರ ಕಾರ್ಯ ಮತ್ತು ವಿಚಾರಗಳಿಂದ ಪ್ರಭಾವಿತನಾಗಿ ಅವರ ಬಗ್ಗೆ ಗೌರವ ಹೊಂದಿರುವ ನನಗೆ ಸಹಜವಾಗಿ ಈ ಲೇಖನದಿಂದ ಮನಸ್ಸಿಗೆ ಬಹಳ ನೋವಾಯಿತು. ಲೇಖನ ಓದಿದ ರಾತ್ರಿಯೆಲ್ಲ ಚಡಪಡಿಸಿದ್ದೇನೆ. ಲೇಖನಕ್ಕೆ ಪ್ರತಿಕ್ರಿಯೆ ಬರೆದು ಹೃದಯದ ಭಾರವನ್ನು ಇಳಿಸಿಕೊಳ್ಳಬೇಕೆಂದು ಅನಿಸಿದ್ದರಿಂದ ಈಗ ಈ ಪ್ರತಿಕ್ರಿಯೆ ಬರೆದಿದ್ದೇನೆ. ಅಂಬೇಡ್ಕರ್ ಮತ್ತು ಗಾಂಧಿಯವರ ಬಗ್ಗೆ ಅಪಾರವಾದ ಗೌರವವಿದೆ. ನಾನು ತಿಳಿದಿರುವಂತೆ ಅವರಿಬ್ಬರೂ ಸಮಾಜದ ಹಲವಾರು ಸಮಸ್ಯೆಗಳ ಬಗ್ಗೆ ಮುಖ್ಯವಾಗಿ ದಲಿತರ ಸಮಸ್ಯೆಯ ಬಗ್ಗೆ ಚಿಂತನೆ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಲು ತಮ್ಮದೇ ಆದ ರೀತಿಗಳಲ್ಲಿ ಪ್ರಯತ್ನಿಸಿದಂತವರು. ಮಾರ್ಗಗಳು ಬೇರೆಯಾಗಿದ್ದರೂ ಕೂಡ ಗಮ್ಯ ಅಥವಾ ಗುರಿ ಒಂದೇ ಆಗಿತ್ತು. ಗಾಂಧೀಜಿಯವರ ಗುರಿಯ ಬಗ್ಗೆ ಡಾ.ಅಂಬೇಡ್ಕರ್ ಪ್ರಶ್ನಿಸಲಿಲ್ಲ. ಅದರಂತೆಯೇ ಡಾ.ಅಂಬೇಡ್ಕರರ ಗುರಿಯನ್ನು ಗಾಂಧೀಜಿ ಪ್ರಶ್ನಿಸಲಿಲ್ಲ. ದಲಿತರ ಏಳಿಗೆಗಾಗಿ ಹೋರಾಡಿದ ಡಾ. ಅಂಬೇಡ್ಕರ್ ಮತ್ತು ಗಾಂಧೀಜಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಗಾಂಧೀಜಿ ಎಂದೂ ತಮ್ಮನ್ನು ಮಹಾತ್ಮರೆನಿಸಿಕೊಳ್ಳಲು ಬಯಸಲಿಲ್ಲ. ಕವಿ ಮತ್ತು ಸಾಹಿತಿ ಡಾ.ರವೀಂದ್ರನಾಥ್ ಠಾಕೂರ್ ಮೊದಲಬಾರಿಗೆ ಗಾಂಧೀಜಿಯವರನ್ನು ಮಹಾತ್ಮ ಎಂದು ಕರೆದರು. ಆನಂತರ ಜನಸಾಮಾನ್ಯರು ಅವರನ್ನು ಮಹಾತ್ಮರೆಂದು ಕರೆಯಲಾರಂಭಿಸಿದರು. ಜ್ಞಾನ ಮತ್ತು ಶೈಕ್ಷಣಿಕ ಅರ್ಹತೆಯಲ್ಲಿ ಡಾ.ಅಂಬೇಡ್ಕರರು ಗಾಂಧೀಜಿಯವರಿಗಿಂತ ಉನ್ನತ ಮಟ್ಟದಲ್ಲಿದ್ದಾರೆ ಎಂಬ ಕಾರಣದಿಂದಾಗಿಯೇ ಮಹಾತ್ಮ ಎಂಬ ಟೈಟಲನ್ನು ಪ್ರಶ್ನಿಸುವ ಸಹಜತೆ ಮತ್ತು ಸಾಮರ್ಥ್ಯ ಬರುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟವೆನಿಸುತ್ತದೆ. ಯಾಕೆಂದರೆ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ಗೌರವ ಮೂಡುವುದು ಮತ್ತು ಆ ವ್ಯಕ್ತಿಗೆ ತಮ್ಮದೇ ಆದ ಗೌರವ ಸೂಚಕ ಪದವನ್ನು ನೀಡುವುದರ ಹಿಂದೆ ಯಾವುದೇ ಗಣಿತಶಾಸ್ತ್ರವಿರುವುದಿಲ್ಲ. ಅದು ಆಯಾ ಜನರಲ್ಲಿಯ ಭಾವನೆ, ಗೌರವ, ಅನುಭವ ಮುಂತಾದ ಭಾವನಾಲೋಕದ ತುಡಿತಗಳಿರುತ್ತವೆ. ಒಂದು ವೇಳೆ ಜನರು ಕೊಟ್ಟ ಪದವಿ ನಮಗಿಷ್ಟವಾಗದಿದ್ದಲ್ಲಿ ಅದನ್ನು ನಾವು ಉಪಯೋಗಿಸಬಾರದಷ್ಟೇ. ಬೇಸರವಾಗಿದೆಯೆಂಬ ಕಾರಣಕ್ಕಾಗಿ ಸಂಬಂಧಿಸಿದ ವ್ಯಕ್ತಿಯಲ್ಲಿ ಇಲ್ಲದೇ ಇರುವ ದೋಷಗಳನ್ನು ಕಂಡು ಹಿಡಿಯಲು ಪ್ರಯತ್ನಿಸಬಾರದು. ಇದುವರೆಗೆ ಪ್ರಕಟವಾಗಿರುವ ಗಾಂಧೀ ಕುರಿತ ಅಪಾರವಾದ ಸಾಹಿತ್ಯದಲ್ಲಿ ಮೋಹನದಾಸ್ ಕರಮಚಂದ ಗಾಂಧೀ ವೇಷ ಬದಲಿಸಿ ಮಹಾತ್ಮರಾದರೆಂದು ಎಲ್ಲೂ ಉಲ್ಲೇಖಿತವಾಗಿಲ್ಲ. ಅವರ ವ್ಯಕ್ತಿತ್ವ

ಹೇಗೆ ಬದಲಾಗುತ್ತಾ ಮತ್ತು ಬೆಳೆಯುತ್ತಾ ಬಂದಿತೆಂಬುದು ಗಾಂಧಿ ಕುರಿತ ಎಲ್ಲ ಇತಿಹಾಸಕಾರರಿಗೆ ಗೊತ್ತಿದೆ. ಯಾವ ಇತಿಹಾಸಕಾರರೂ ಇದುವರೆಗೆ ಗಾಂಧೀಜಿ ವೇಷ ಬದಲಾಯಿಸಿ ಗಟಾರದ ನೀರನ್ನು ಕುಡಿದು ಮಹಾತ್ಮರಾದರೆಂದು ಸಂಶೋಧಿಸಿಲ್ಲ. ಯಾವುದೇ ನಾಗರೀಕ ದೇಶಗಳಲ್ಲಿ ಗಾಂಧೀಜಿ ತಮ್ಮ ಜೀವನದಲ್ಲಿ ಮಾಡುತ್ತಿದ್ದ ಪ್ರಯೋಗಗಳಿಂದ ನಕ್ಕಿದ್ದಿಲ್ಲ. ಟೀಕೆ ಟಿಪ್ಪಣಿ ಮಾಡಿರಬಹುದು. ಆದರೆ ಅವರ ಶ್ರದ್ಧೆಯನ್ನು ಪ್ರಶ್ನಿಸಿಲ್ಲ. ಬದಲಿಗೆ ಗಾಂಧಿಗೆ ಕೊಟ್ಟ ಸೆರೆಮನೆ ವಾಸದ ಶಿಕ್ಷೆಗಾಗಿ ಪ್ರಾಯಶ್ಚಿತ್ತಪಟ್ಟಿದ್ದಾರೆ.

ಗಾಂಧೀಜಿಯವರು ಸತ್ಯ ಮತ್ತು ಅಹಿಂಸಾ ಸಿದ್ಧಾಂತಗಳು ತಮ್ಮ ಒರಿಜಿನಲ್ ಸಿದ್ಧಾಂತಗಳೆಂದು ಎಲ್ಲಿಯಾದರೂ ಹೇಳಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಅವೆರಡೂ ಸಿದ್ಧಾಂತಗಳು ಬೌದ್ಧಧರ್ಮದ ಸಿದ್ಧಾಂತಗಳೆಂದು ಗಾಂಧೀಜಿ ಕೂಡ ಹೇಳಿದ್ದಾರೆ. ಅವು ಹಿಮಾಲಯದಷ್ಟು ಪ್ರಾಚೀನವೆಂದೂ ಹೇಳಿದ್ದಾರೆ. ಪ್ರಾಚೀನತಮವಾದ ಮತ್ತು ಕೇವಲ ಧರ್ಮದ ಚೌಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಆ ಸಿದ್ಧಾಂತಗಳನ್ನು ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಪ್ರಯೋಗ ಮಾಡಿದ್ದಾರೆ. ಆ ಸಿದ್ಧಾಂತಗಳ ಬಗ್ಗೆ ಗಾಂಧಿ ಕಾಪಿರೈಟ್ ಹೊಂದಿದ್ದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಸತ್ಯವನ್ನು ಎತ್ತಿಹಿಡಿಯುವುದು ಹೇಗೆ ಮತ್ತು ಅಹಿಂಸೆಯನ್ನು ಯಾವ ಹಂತದವರೆಗೆ ಪಾಲಿಸಬಹುದು ಎಂಬುದರ ಪ್ರಯೋಗವನ್ನು ಗಾಂಧೀ ಮಾಡಿದ್ದಾರೆ. ತಮ್ಮ ತೀರ್ಮಾನವೇ ಅಂತಿಮವಲ್ಲವೆಂದೂ, ಪ್ರತಿಯೊಬ್ಬರು ತಮ್ಮ ತಮ್ಮ ಪ್ರಯೋಗಗಳ ಬೆಳಕಿನಲ್ಲಿ ಮುನ್ನಡೆಯಬೇಕೆಂದು ಹೇಳಿದ್ದಾರೆ. ಸತ್ಯ ಮತ್ತು ಅಹಿಂಸೆಯ ಪ್ರಯೋಗದಿಂದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಗಾಂಧೀಜಿ ಪ್ರಯತ್ನಿಸಿದರೆ ಹೊರತು ಹೊಸ ಸಮಸ್ಯೆಗಳನ್ನು ಉಂಟುಮಾಡಲು ಅಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಗಾಂಧೀಜಿಯವರು ಬೌದ್ಧಧರ್ಮದಿಂದ ಸತ್ಯ ಮತ್ತು ಅಹಿಂಸೆಯ ವಿಚಾರಗಳನ್ನು ಪಡೆದರೆ ಕ್ರಿಶ್ಚಿಯನ್ ಧರ್ಮದಿಂದ ಪ್ರೇಮದ ವಿಚಾರವನ್ನು ಪಡೆದರು. ಇಸ್ಲಾಂ ಧರ್ಮದಿಂದ ಸಹೋದರತ್ವದ ವಿಚಾರ ಪಡೆದರು. ಎಲ್ಲ ಧರ್ಮಗಳಲ್ಲಿಯ ಶ್ರೇಷ್ಠ ವಿಚಾರಗಳನ್ನು ಪಡೆದು ಮಾನವ ಧರ್ಮವೆಂಬ ನವನೀತವನ್ನು ಕೊಟ್ಟರು. ಅವರು ಎಂದೂ ಬೇರೆಯವರ ಬಂಡವಾಳದಲ್ಲಿ ಯಾವುದೇ ಪ್ರಕಾರದ ವ್ಯಾಪಾರಮಾಡಿಲ್ಲ. ಆಯಾ ವಿಚಾರದ ಮೂಲ ಪುರುಷರಿಗೆ ತಮ್ಮ ಕೃತಜ್ಞತೆ ತಿಳಿಸಿದ್ದಾರೆ. ಗಾಂಧೀಜಿವಯರ ಜೀವನ ವಿಷಯ ಗಂಭೀರತೆ ಮತ್ತು ಪ್ರಾಮಾಣಿಕತೆಯಿಂದ ತುಂಬಿದುದಾಗಿದೆ ಎಂಬ ಸಂಗತಿ ಅವರ ಜೀವನ ಚರಿತ್ರೆ, ದಕ್ಷಿಣ ಆಫ್ರಿಕಾದಲ್ಲಿಯ ಸತ್ಯಾಗ್ರಹ ಮತ್ತು ಅವರ ಲೇಖನಗಳನ್ನು ಓದಿದವರಿಗೆಲ್ಲ ಗೊತ್ತಾಗುತ್ತದೆ. ಅವರು ಎಂದೂ ತಮ್ಮ ಅಂಗಿಯ ತೋಳಿನ ಸಂದಿಯಲ್ಲಿ ಕತ್ತಿಯನ್ನು

ಅಡಗಿಸಿಟ್ಟುಕೊಂಡಿರಲಿಲ್ಲ. ಅವರ ವ್ಯವಹಾರವೆಲ್ಲ ಪಾರದರ್ಶಕವಾಗಿತ್ತು. ಅವರೆಂದೂ ಯಾರಿಗೂ ವಿಶ್ವಾಸಘಾತಮಾಡಿದ ಉದಾಹರಣೆಯಿಲ್ಲ. ಅವರು ಎಂದೂ ಹಿಂದಿನಿಂದ ಯಾರ ಮೇಲೂ ದಾಳಿ ಮಾಡಿದವರಲ್ಲ. ದುಂಡು ಮೇಜಿನ ಪರಿಷತ್ತು ಸಂಪೂರ್ಣವಾಗಿ ರಾಜಕೀಯ ಪರಿಷತ್ತಾಗಿತ್ತು. ಅಲ್ಲಿಯೂ ಇಂಗ್ಲೀಷರು "ಒಡೆದು ಆಳುವ ನೀತಿಯನ್ನು" ಅನುಸರಿಸಲು ಪ್ರಯತ್ನಿಸುತ್ತಿದ್ದರು. ಭಾರತದಲ್ಲಿಯ ದಲಿತರ ಸಮಸ್ಯೆ ರಾಜಕೀಯವಾದುದಲ್ಲ ಅದೊಂದು ಉಗ್ರವಾದ ಸಾಮಾಜಿಕ ಸಮಸ್ಯೆಯಾಗಿತ್ತು. ಸಾಮಾಜಿಕ ಸಮಸ್ಯೆಯ ಪರಿಹಾರಕ್ಕೆ ರಾಜಕೀಯ ತಂತ್ರವನ್ನು ಉಪಯೋಗಿಸಿದಲ್ಲಿ ಸಮಸ್ಯೆ ಕರಾಳ ರೂಪವನ್ನು ತಾಳುತ್ತದೆಯೆಂಬ ಯೋಚನೆಯಿಂದ ಗಾಂಧೀಜಿ ಆ ಸಮಸ್ಯೆಯನ್ನು ತಮ್ಮ ಹತೋಟಿಯಲ್ಲಿರಿಸಿಕೊಳ್ಳಲು ಪ್ರಯತ್ನಿಸಿದರೆ ವಿನಃ ಬೇರೆ ಯಾವುದೇ ಮುಖಂಡರನ್ನು ಅಲ್ಲಗಳೆಯುವ ಕುಹಕ ನೀತಿಯಾಗಿರಲಿಲ್ಲ. ದಲಿತರ ಸಮಸ್ಯೆಗೆ ಕಾರಣವಾಗಿದ್ದ ಹಿಂದೂ ಧರ್ಮದಲ್ಲಿಯ ಲೋಪದೋಷಗಳ ನಿವಾರಣೆಗಾಗಿ ಅವರು ಬಹಳಷ್ಟು ಪ್ರಯತ್ನಿಸಿದರು, ಪಶ್ಚಾತ್ತಾಪಪಟ್ಟರು, ಮುಂದಿನ ಜನ್ಮದಲ್ಲಿ ದಲಿತ ಬಾಲಕಿಯಾಗಿ ಜನ್ಮ ಪಡೆಯಬೇಕೆಂಬ ಇಚ್ಛೆಪಟ್ಟರು. ಹಿಂದೂ ಧರ್ಮದ ಶುದ್ಧೀಕರಣಕ್ಕಾಗಿ ಅವರು ಮಾಡಿದ ಪ್ರಯತ್ನ, ಹರಿಜನೋದ್ಧಾರಕ್ಕಾಗಿ ಮಾಡಿದ ಪ್ರಯತ್ನ ಎಲ್ಲರಿಗು ವಿದಿತವಾಗಿದೆ. ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆ ಮತ್ತು ಬಾಲಗಂಗಾಧರ ತಿಲಕ್ ಹಾಗೂ ಆಗಿನ ಕಾಲದ ಎಲ್ಲ ದೇಶ ನಾಯಕರ ಬಗ್ಗೆ ಅಪಾರವಾದ ಗೌರವವಿರಿಸಿಕೊಂಡಿದ್ದರು. ಗುರು ಹಿರಿಯರನ್ನು, ಜ್ಞಾನಿಗಳನ್ನು ಗೌರವಿಸುವುದು ಗಾಂಧಿಯವರ ರಕ್ತದಲ್ಲಿಯೇ ಇದ್ದ ಗುಣವಾಗಿತ್ತು. ಆದ್ದರಿಂದ "ತಿಲಕ್ ಸ್ವರಾಜ್ಯ ನಿಧಿ" ಯ ಬಗ್ಗೆ ಹೇಳಿರುವ ಮಾತುಗಳು ಸತ್ಯಕ್ಕೆ ದೂರವಾದವು.

ಗಾಂಧೀಜಿಯೆಂದೂ ರಾಜಕಾರಣದಲ್ಲಿ ವ್ಯಾಪಾರೀಕರಣವನ್ನು ಮಾಡಿದವರಲ್ಲ. ಅವರು ಪಕ್ಷಗಳ ರಾಜಕಾರಣಕ್ಕೆ ಭಿನ್ನವಾದ ಪ್ರಜಾರಾಜ್ಯವನ್ನು ಪ್ರತಿಪಾದಿಸಿದವರಾಗಿದ್ದರು. ಮತ್ತು ರಾಜಕಾರಣದಲ್ಲಿ ಆಧ್ಯಾತ್ಮಿಕತೆಯ ಮೂಲಕ ನೈತಿಕತೆಯನ್ನು ಸ್ಥಾಪಿಸಲು ಬಯಸಿದ್ದರು. ಅಂಬೇಡ್ಕರರ ೧೨೫ನೇ ಜಯಂತಿಯ ಸಂದರ್ಭದಲ್ಲಿ ರಘೋತ್ತಮ ಹೊ.ಬ.ರವರು ಬರೆದ ಲೇಖನ ಸಂತೋಷವನ್ನುಂಟುಮಾಡುವುದರ ಬದಲು ನೋವನ್ನುಂಟುಮಾಡಿತು. ಯಾವ ಉದ್ದೇಶದಿಂದ ಈ ಲೇಖನವನ್ನು ಪತ್ರಿಕೆ ಪ್ರಕಟಿಸಿತು ಎಂಬುದು ಗೂಢವಾಗಿಯೇ ಉಳಿಯುತ್ತದೆ.

ಕೇಂದ್ರ ಸರ್ಕಾರದ ಭೂ ಸ್ವಾಧೀನ ಮಸೂದೆಯ ಬಗ್ಗೆ ಸರ್ವೋದಯ ಆಂದೋಲನದ ನಿಲುವು.

ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಅಗತ್ಯವಿರುವ ಭೂಮಿಯನ್ನು ರೈತರಿಂದ ಪಡೆಯಲು ಕೇಂದ್ರ ಸರ್ಕಾರ ಭೂ ಸ್ವಾಧೀನಕ್ಕಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಅದನ್ನು ಕಾನೂನಾಗಿ ಪರಿವರ್ತಿಸುವ ದೃಷ್ಟಿಯಿಂದ ಸಂಸತ್ತಿನಲ್ಲಿ ಮಂಡಿಸಲಾಗಿದೆ. ಲೋಕಸೇವೆಯಲ್ಲಿ ಆಡಳಿತ ಪಕ್ಷಕ್ಕೆ ಬಹುಮತ ಇರುವುದರಿಂದ ಅಲ್ಲಿ ಸುಗ್ರೀವಾಜ್ಞೆಗೆ ಕೆಲ ತಿದ್ದುಪಡಿಗಳೊಂದಿಗೆ ಒಪ್ಪಿಗೆ ದೊರೆತಿದೆ. ರಾಜ್ಯ ಸಭೆಯಲ್ಲಿ ಒಪ್ಪಿಗೆ ಆಗಬೇಕಿದೆ. ಆದರೆ ಅಲ್ಲಿ ಆಡಳಿತ ಪಕ್ಷಕ್ಕೆ ಬಹುಮತ ಇಲ್ಲದೆ ಇರುವುದರಿಂದ ಬಲವಾದ ವಿರೋಧಕ್ಕೂ ಮತ್ತು ಚರ್ಚೆಗೂ ಗ್ರಾಸವಾಗಿದೆ. ರಾಜ್ಯ ಸಭೆಯ ಒಪ್ಪಿಗೆ ಪಡೆಯಲು ಸರ್ಕಾರ ಹರ ಸಾಹಸ ಮಾಡುತ್ತಿದೆ. ದೇಶದಾದ್ಯಂತ ಕೂಡ ಸುಗ್ರೀವಾಜ್ಞೆಗೆ ವಿರೋಧ ವ್ಯಕ್ತವಾಗುತ್ತಿದೆ. ರೈತರ ಮತ್ತು ಗ್ರಾಮಗಳ ಹಿತವನ್ನು ಬಯಸುವ ಎಲ್ಲ ಜನರು ಮತ್ತು ಸಂಘಟನೆಗಳು ವಿರೋಧ ಮಾಡುತ್ತಿವೆ. ಸರ್ಕಾರ ರೈತರ ಮತ್ತು ವಿರೋಧ ಪಕ್ಷಗಳ ಮತ್ತು ಭಿನ್ನಮತೀಯರ ಮನ ಒಲಿಸಲು ಪ್ರಯತ್ನ ಮಾಡುತ್ತಿದೆ. ದೇಶದ ಅಭಿವೃದ್ಧಿಗಾಗಿ ಮತ್ತು ರೈತರ ಗ್ರಾಮಗಳ ಸ್ವಂತ ಹಿತಕ್ಕಾಗಿ ರೈತರು ಭೂಮಿಯನ್ನು ಬಿಟ್ಟುಕೊಡಬೇಕೆಂದು ಸರ್ಕಾರ ಪ್ರತಿಪಾದಿಸುತ್ತಿದೆ. ಆದರೆ ಅನೇಕ ಚಿಂತಕರ ಪ್ರಕಾರ ಭೂ ಸ್ವಾಧೀನ ಮಸೂದೆ ರೈತರ ಹಿತವನ್ನು ಬಲಿಗೊಡುವಂಥದ್ದಾಗಿದೆ. ದೇಶದಲ್ಲಿ ಪದಾರ್ಥಗಳ ಉತ್ಪಾದನೆಗಾಗಿ ಮತ್ತು ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ದೇಶದ ಪ್ರಧಾನಿಯವರು ವಿದೇಶಗಳಿಗೆ ಹೋಗಿ ಅಲ್ಲಿಯ ಬಹುರಾಷ್ಟ್ರೀಯ ಕಂಪನಿಗಳನ್ನು ಭಾರತಕ್ಕೆ ಬರಲು ಆಹ್ವಾನಿಸುತ್ತಿದ್ದಾರೆ. ಆ ಕಂಪನಿಗಳಿಗೆ ಭೂಮಿ, ನೀರು, ಶಕ್ತಿ ಮತ್ತು ತೆರಿಗೆ ರಿಯಾಯಿತಿ ಇತ್ಯಾದಿ ಅನುಕೂಲ ಮಾಡಿಕೊಡುವುದಾಗಿ ಭರವಸೆ ಕೊಡುತ್ತಿದ್ದಾರೆ. ತಾವು ಕೊಡುತ್ತಿರುವ ಭರವಸೆಯನ್ನು ಈಡೇರಿಸಲು ಸರ್ಕಾರ ಕಡ್ಡಾಯವಾಗಿ ಭೂ ಸ್ವಾಧೀನ ಮಾಡಿಕೊಳ್ಳಲೇಬೇಕಾಗಿರುವಂಥ ಪರಿಸ್ಥಿತಿಯನ್ನು ನಿರ್ಮಾಣಮಾಡಿಕೊಳ್ಳುತ್ತಿದೆ. ಕ್ರಮೇಣ ದೇಶದಲ್ಲಿ ಕಂಪನಿ ರಾಜ್ಯ ಪ್ರಾರಂಭವಾಗುವ ಎಲ್ಲ ಸೂಚನೆಗಳು ಕಾಣಬರುತ್ತಿವೆ. ಸ್ಮಾರ್ಟ್ ಸಿಟಿ ಮತ್ತು ಸ್ಮಾರ್ಟ್ ವಿಲೇಜ್ ಎಂಬ ಮೋಹಕ ಕಾರ್ಯಕ್ರಮಗಳನ್ನು ಘೋಷಿಸುವುದರ ಮೂಲಕವು ಸರ್ಕಾರ ಭೂ ಗ್ರಹಣ ಮಾಡಲು ಹೊರಟಿದೆ.

ದೇಶದ ಬೆನ್ನೆಲುಬು ರೈತ. ಮತ್ತು ದೇಶವೆಂಬ ಭವ್ಯ ಕಟ್ಟಡದ ಅಡಿಪಾಯ ಗ್ರಾಮಗಳು ಎಂಬುದು ಎಲ್ಲರಿಗು ಗೊತ್ತಿರುವ ಸಂಗತಿ. ಮಹಾತ್ಮ ಗಾಂಧೀಜಿಯವರು,

ಸಂತ ವಿನೋಬಾ ಭಾವೆಯವರು ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣರು ಮುಂತಾದ ನಾಯಕರು ಗ್ರಾಮ ರಾಜ್ಯದ ವಿಚಾರವನ್ನು ದೇಶದ ಮುಂದೆ ಇಟ್ಟಿದ್ದರು. ಅದಕ್ಕಾಗಿ ಅವರು ಬಹಳಷ್ಟು ಕೆಲಸ ಮಾಡಿದರು ಕೂಡ ಗಾಂಧೀಜಿಯವರು ಒಂದು ಹೆಜ್ಜೆ ಮುಂದೆ ಹೋಗಿ ಅಂತ್ಯೋದಯದ ಮೂಲಕ ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡಂತೆ ಸರ್ವೋದಯ ಸಮಾಜದ ಕಲ್ಪನೆಯನ್ನು ಇಟ್ಟರು. ಕೇಂದ್ರ ಸರ್ಕಾರದ ಉದ್ದೇಶಿತ ಭೂ ಸ್ವಾಧೀನ ಮಸೂದೆ ಕಾನೂನಾಗಿ ಜಾರಿಗೆ ಬಂದ ಪಕ್ಷದಲ್ಲಿ ಮೇಲ್ಕಾಣಿಸಿದ ನಾಯಕರ ಆಶಯಗಳು ನುಚ್ಚು ನೂರಾಗುವುದಲ್ಲದೆ ಭಾರತ ತನ್ನ ಆರ್ಥಿಕ ಸ್ವಾತಂತ್ರ್ಯ ಕಳೆದುಕೊಳ್ಳುವ ಮೂಲಕ ರಾಜಕೀಯ ಸ್ವಾತಂತ್ರ್ಯ ಕಳೆದುಕೊಳ್ಳುವ ಭೀತಿಯುಂಟಾಗುತ್ತದೆ. ಅಲ್ಲದೆ ಬೃಹತ್ ಕೈಗಾರಿಕೀಕರಣದ ಉದ್ದೇಶವೆ ಸೈನ್ಯ ಶಕ್ತಿಯನ್ನು ಬಲಗೊಳಿಸುವುದೆ ಆಗಿದೆ. ಪರೋಕ್ಷವಾಗಿ ಯುದ್ಧ ಸನ್ನದ್ಧವಾಗುವ ರೀತಿಯೆ ಆಗಿದೆ. ಜಾಗತಿಕ ಶಾಂತಿ ಬಯಸುವ ಭಾರತ ಸೈನ್ಯಶಕ್ತಿಯನ್ನು ಬಲಾಢ್ಯಗೊಳಿಸುವಂಥ ಪೈಪೋಟಿಗೆ ಇಳಿಯಕೂಡದು.

ಮೇಲ್ಕಾಣಿಸಿದ ವಿಚಾರ ಸರಣಿಯ ಆಧಾರದ ಮೇಲೆ ಸರ್ವೋದಯ ಆಂದೋಲನವು ಕೇಂದ್ರ ಸರ್ಕಾರದ ಭೂಸ್ವಾಧೀನ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ರೈತರ ಮತ್ತು ಗ್ರಾಮಗಳ ಹಿತರಕ್ಷಣೆಗಾಗಿ ನಡೆಯುವ ಚಳುವಳಿಗಳಿಗೆ ತನ್ನ ನೈತಿಕ ಬೆಂಬಲವನ್ನು ಸೂಚಿಸುತ್ತದೆ. ಅಗತ್ಯವಿದ್ದಲ್ಲಿ ಸತ್ಯಾಗ್ರಹದಂಥ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ಯುಕ್ತವಾಗುತ್ತದೆ.

ಖಾದಿ ವಿಚಾರ



ಐತಿಹಾಸಿಕ ಖಾದಿ ಕೇಂದ್ರ : ಬದನವಾಳು

ಬದನವಾಳು ನೂಲುತ್ಪಾದನಾ ಕೇಂದ್ರವನ್ನು ೧೯೨೭ರಲ್ಲಿ ಸ್ಥಾಪಿಸಲಾಯಿತು. ಇದನ್ನು ಅಂದಿನ ಮೈಸೂರು ಸಂಸ್ಥಾನದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಸ್ಥಾಪಿಸಿತು. ಆನಂತರದ ದಿನಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಐಮಂಗಲ ಎಂಬಲ್ಲಿ ಹಾಗೂ ಕೋಲಾರದ ಹೊಸೂರು ಮತ್ತು ಲೋಕಪಾವನಿ ಎಂಬಲ್ಲಿ ನೂಲುಗಾರಿಕೆಯ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಮುಂದೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ೧೯೫೦ರ ಸುಮಾರಿನಲ್ಲಿ ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಸಮಿತಿಗೆ ವರ್ಗಾಯಿಸಲ್ಪಟ್ಟವು. ಅದರ ಹಿಂದೆ ಇದ್ದ ಉದ್ದೇಶ ಉತ್ತಮ ಕಾರ್ಯನಿರ್ವಹಣೆ ಮತ್ತು ನೂಲುಗಾರಿಕೆ, ನೇಯ್ಗೆ, ಕೈಕಾಗದ ತಯಾರಿಕೆ, ಜೇನು ಸಾಕಣೆ, ಬಣ್ಣ ಹಾಕುವುದು ಮತ್ತು ಬಟ್ಟೆಯ ಮೇಲೆ ಮುದ್ರಿಸುವುದು ಮುಂತಾದ ಕಾರ್ಯಚಟುವಟಿಕೆಗಳಲ್ಲಿ ಹೊಂದಾಣಿಕೆ ಮಾಡುವುದೇ ಆಗಿತ್ತು. ಈ ಕೇಂದ್ರಕ್ಕೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಧನ ಸಹಾಯ ದೊರೆಯಲಾರಂಭಿಸಿತು. ಈ ಎಲ್ಲ ಗ್ರಾಮೋದ್ಯೋಗ ಚಟುವಟಿಕೆಗಳಲ್ಲದೆ ಕುಶಲ ಕರ್ಮಿಗಳ ಪ್ರಶಿಕ್ಷಣದಿಂದಾಗಿ ಬಹಳಷ್ಟು ಉದ್ಯೋಗಾವಕಾಶಗಳು ಉಂಟಾದವು. ವಿಶೇಷವಾಗಿ ಬದನವಾಳು ಸುತ್ತಮುತ್ತ. ಬದನವಾಳು ಕೇಂದ್ರದ ಅಂಗವಾಗಿಯೇ ನಂಜನಗೂಡಿನಲ್ಲಿ ಬಣ್ಣ ಹಾಕುವ ಘಟಕವನ್ನು ಸ್ಥಾಪಿಸಲಾಗಿತ್ತು. ನಂಜನಗೂಡು, ಚಾಮರಾಜನಗರ, ಕೆ.ಆರ್.ನಗರ ಮತ್ತು ಕೊಳ್ಳೇಗಾಲ ಮುಂತಾದ ಸ್ಥಳಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಮಾರಾಟಕ್ಕಾಗಿ ಭಂಡಾರಗಳನ್ನು ಪ್ರಾರಂಭಿಸಲಾಗಿತ್ತು. ನನ್ನ ತಂದೆ ಟಿ.ಕೆ.ರಾಮಕೃಷ್ಣ ಅವರು ಬದನವಾಳು ಖಾದಿ ಕೇಂದ್ರದ ವ್ಯವಸ್ಥಾಪಕರಾಗಿ ೧೯೫೭ರಿಂದ ೧೯೬೧ರವರೆಗೆ ಕೆಲಸ ಮಾಡಿದರು. ಸಾಬರಮತಿ ಆಶ್ರಮದಲ್ಲಿ ೩ತಿಂಗಳ ಕಾಲ ಅವರು ಪ್ರಶಿಕ್ಷಣ ಪಡೆದಿದ್ದರು. ಅಲ್ಲಿಂದ ಬಂದಾದ ನಂತರ ಅವರು

ನೇಕಾರರ ಪ್ರಶಿಕ್ಷಣದ ಹೊಣೆಗಾರಿಕೆವಹಿಸಿಕೊಂಡರು. ಅಲ್ಲದೆ ನಾಲ್ಕು ಕಲರಿನ ಅಂಬರ್ ಚರಕ ಪ್ರಚಾರ ಮಾಡುವುದಕ್ಕೆ ತೊಡಗಿದರು. ಆಕಾಶವಾಣಿಯ "ಗ್ರಾಮಸ್ಥರಿಗಾಗಿ" ಎಂಬ ಕಾರ್ಯಕ್ರಮವನ್ನು ಅಂಬರ್ ಚರಕಾದ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡರು. ಕೇಂದ್ರದ ಬಳಿಯಿರುವ ಬಯಲಿನಲ್ಲಿ ಹಳ್ಳಿಗರು ಕುಳಿತು ಆಕಾಶವಾಣಿಯ ಕಾರ್ಯಕ್ರಮವನ್ನು ಕೇಳುತ್ತಿದ್ದ ದೃಶ್ಯ ನನ್ನ ಕಣ್ಣ ಮುಂದೆ ಈಗಲೂ ಕಟ್ಟಿದಂತಿದೆ. ನನ್ನ ತಂದೆ ತೀರಿಕೊಂಡಾದ ನಂತರ ೧೯೬೧ರಿಂದ ೧೯೬೫ರವರೆಗೆ ಖಾದಿ ಕೇಂದ್ರದಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುವ ಅವಕಾಶ ನನಗೆ ದೊರೆಯಿತು.

ಮಹಾತ್ಮ ಗಾಂಧಿಯವರು ೧೯೩೨ರಲ್ಲಿ ಬದನವಾಳು ಕೇಂದ್ರಕ್ಕೆ ಭೇಟಿ ಕೊಟ್ಟರು. ಅದರಿಂದಾಗಿ ಬದನವಾಳು ಪ್ರಖ್ಯಾತಗೊಂಡಿತು. ಗಾಂಧೀಜಿಯವರ ಆ ಭೇಟಿ ಮೈಸೂರು ಸಂಸ್ಥಾನದಲ್ಲಿಯ ಸ್ವಾತಂತ್ರ್ಯ ಹೋರಾಟದೊಂದಿಗೆ ಜೋಡಣೆಗೊಂಡಿತು. ನಂತರ ಬದನವಾಳು ಖಾದಿಗೆ ವಿಶೇಷ ಪಾವಿತ್ರ್ಯತೆ ಬಂದಿತು. ಗಾಂಧಿಯವರ ಅನುಯಾಯಿಯಾಗಿದ್ದ ತಗಡೂರು ರಾಮಚಂದ್ರರಾವ್ ಈ ಕೇಂದ್ರದ ಸ್ನೇಹಿತರು, ಮಾರ್ಗದರ್ಶಕರು ಆಗಿದ್ದರು. ಈ ಸಂದರ್ಭದಲ್ಲಿ ಎಸ್.ವಿ.ರಾಜಾರಾಮ್ ಅಯ್ಯಂಗಾರ್, ಕೆ.ವಿ.ಬಸವಯ್ಯ, ಎನ್.ಎಮ್.ಚನ್ನಬಸಪ್ಪ ಮತ್ತು ಎಮ್.ಶ್ರೀಕಂಠಯ್ಯ ಮುಂತಾದವರನ್ನು ನೆನೆಯಲೇ ಬೇಕು. ಇವರೆಲ್ಲರು ಆ ಕೇಂದ್ರದ ಸ್ಥಾಪನೆಯ ದಿನದಿಂದ ೧೯೬೫ರವರೆಗೆ ವ್ಯವಸ್ಥಾಪಕರಾಗಿ ಕೆಲಸ ಮಾಡಿದ್ದಾರೆ. ಆ ಅವಧಿಯಲ್ಲಿ ಬದನವಾಳು ಕೇಂದ್ರ ಉಚ್ಛ್ರಾಯ ಸ್ಥಿತಿ ತಲುಪಿತ್ತು. ಕೇಂದ್ರದ ಬೆಳ್ಳಿಹಬ್ಬದ ಉತ್ಸವದಲ್ಲಿ ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಭಾಗಿಯಾಗಿದ್ದರು.



ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟ್ ಈ ಮೊದಲು ನಡೆಸುತ್ತಿದ್ದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೆಲವು ಕಾರಣಗಳಿಂದಾಗಿ, ಮುಖ್ಯವಾಗಿ ತಾತ್ವಿಕ ಕಾರಣಗಳಿಂದಾಗಿ ನಿಲ್ಲಿಸಲಾಯಿತು. ಟ್ರಸ್ಟಿಗೆ ಪ್ರಾರಂಭದಿಂದಲೂ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಆಸಕ್ತಿ ಇರುವುದರಿಂದ ಕಳೆದ ಐವತ್ತೈದು ವರ್ಷಗಳಿಂದ "ಶ್ರೀ ಕೃಷ್ಣ ಕನ್ನಡ ಶಿಶು ವಿಹಾರ" ವನ್ನು ನಡೆಸಿಕೊಂಡು ಬರಲಾಗುತ್ತಿದೆ. ಇತ್ತೀಚೆಗೆ ಹೊಸದೊಂದು ಶೈಕ್ಷಣಿಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಅದೇ ಅನೌಪಚಾರಿಕ "ಜೀವನ ಶಾಲೆ", ಈ ಶಾಲೆಗೆ ಗ್ರಾಮದ ಮಕ್ಕಳು ಶಾಲಾ ಅವಧಿಯ ನಂತರ ಬರುತ್ತಾರೆ. ಶನಿವಾರ, ಭಾನುವಾರ ಮತ್ತು ರಜಾ ದಿನಗಳಂದೂ ಬರುತ್ತಾರೆ. ಹೊಸ ಜೀವನದಾರಿ ಕೇಂದ್ರದಲ್ಲಿ ಒಟ್ಟಾಗಿ ಸೇರಿ ವಿವಿಧ ಬಗೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ತೋಟದ ಕೆಲಸ ಮಾಡುವುದು, ಕೈ ಮಗ್ಗಕ್ಕೆ ಸಂಬಂಧಿಸಿದ ಇತರೆ ಪೂರಕ ಕೆಲಸಗಳನ್ನು ಮಾಡುವುದು, ನೇಯ್ಗೆ ಮಾಡುವುದು, ಕೈ ಮಗ್ಗಕ್ಕೆ ಸಂಬಂಧಿಸಿದ ಇತರೆ ಪೂರಕ ಕೆಲಸಗಳನ್ನು ಮಾಡುವುದು, ಆಟವಾಡುವುದು, ವಿವಿಧ ವಿಷಯಗಳ ಬಗ್ಗೆ ಇರುವ ಸಾಕ್ಷ್ಯ ಚಿತ್ರಗಳನ್ನು ನೋಡುವುದು, ಪಕ್ಷಿ ವೀಕ್ಷಣೆ, ಸಸ್ಯಗಳ ಪರಿಚಯ ಇತ್ಯಾದಿ ಪರಿಸರಕ್ಕೆ ಸಂಬಂಧಿಸಿದ ವಿಷಯ ತಿಳಿಯುವುದು ಹೀಗೆ ಹತ್ತಾರು ಬಗೆಯ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುತ್ತಾರೆ. ಜೀವನ ಶಾಲೆಯಲ್ಲಿ ಕೇವಲ ೧೫ ಮಕ್ಕಳನ್ನು ಸೇರಿಸಿಕೊಳ್ಳಲಾಗಿದೆ. ಅವರೆಲ್ಲರೂ ಮಾಧ್ಯಮಿಕ ಶಾಲೆಯ ಮಕ್ಕಳಾಗಿದ್ದಾರೆ. ಇತ್ತೀಚೆಗೆ ನಡೆದ ಸುಸ್ಥಿರ ಬದುಕಿನತ್ತ ಬದನವಾಳು ಸತ್ಯಾಗ್ರಹದ ಅಂಗವಾಗಿ ನಡೆದ ಪಾದಯಾತ್ರೆಯಲ್ಲಿ ಜೀವನ ಶಾಲೆಯ ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು. ಇತ್ತೀಚೆಗೆ ಇಂಗ್ಲೀಷ್ ಲೇಖಕ ಆರ್.ಕೆ.ನಾರಾಯಣ್ ರವರ "ಸ್ವಾಮಿ ಮತ್ತು ಗೆಳೆಯರು" ಎಂಬ ನಾಟಕವನ್ನು ಕಲಿತು ಪ್ರದರ್ಶನಕೊಟ್ಟರು. ರಂಗಭೂಮಿಗೆ ಮಕ್ಕಳನ್ನು ಸಿದ್ಧಪಡಿಸಿದವರು ಸುಪ್ರಸಿದ್ಧ ಕಲಾವಿದ ಮೇಕಪ್‌ನಾಣಿ ಮತ್ತು ಭಾರ್ಗವಿ ನಾರಾಯಣ್‌ರವರ ಮಗಳಾದ ಸುಜಾತ ಬೆಳವಾಡಿಯವರು.

******

ಮೈಸೂರಿನಿಂದ ಕಾಂಚನ ಹಾಗೂ ಅವರ ಗೆಳತಿ, ಖಾದ್ರಿ ಅಚ್ಯುತನ್, ಇಂಜಿನಿಯರ್ ನಾಗರಾಜು, ಮೈಸೂರಿನಿಂದ ಸಚ್ಚಿದಾನಂದ ಮತ್ತು ಅವರ ಪತ್ನಿ, ತನುಜಾ ಮತ್ತು ಸ್ನೇಹಿತರು, ಜಯಶಂಕರ್‌ರವರು, ಚೆನ್ನೈನಿಂದ ಕೇಸರಿ ಪ್ರಸಾದ್ ಹಾಗೂ ಪತ್ನಿ, ಪಿ.ಎ.ಪಿ ರಮೇಶ್‌ರವರು ಇವರುಗಳು ಇತ್ತೀಚೆಗೆ ಟ್ರಸ್ಟ್‌ಗೆ ಭೇಟಿ ಕೊಟ್ಟ ಆತ್ಮೀಯರಲ್ಲಿ ಪ್ರಮುಖರು.

ಜನಪದ ನಿಲಯದ ಅಂತರಂಗದಲ್ಲಿ – ೧೩೪



ಜನಪದ ಸೇವಾ ಟ್ರಸ್ಟಿನ ಬೆಳವಣಿಗೆಯಲ್ಲಿ ಜನಪದ ನಿಲಯದ ಪಾತ್ರ ಹಿರಿದಾಗಿದೆ ಹಾಗೂ ವರ್ಣಮಯವಾಗಿದೆ. ೧೯೬೦ರಲ್ಲಿ ಟ್ರಸ್ಟ್ ಪ್ರಾರಂಭವಾದಾಗಿನಿಂದ ೨೦೧೫ರ ವರ್ಷದವರೆಗೆ ಅಂದರೆ ೫೫ವರ್ಷಗಳಷ್ಟು ದೀರ್ಘ ಅವಧಿಯಲ್ಲಿ ಟ್ರಸ್ಟಿಗೆ ಸಂಬಂಧಿಸಿದ ಧರ್ಮದರ್ಶಿ ಮಂಡಲಿಯ ಅದೆಷ್ಟೊ ಸಭೆಗಳು ನಡೆದುಹೋಗಿವೆ. ಧರ್ಮದರ್ಶಿ ಮಂಡಲಿಯ ಸಭೆಯೆಂದರೆ ಅದೊಂದು ರೀತಿ ಹಬ್ಬದ ದಿನವಾಗಿ ಪರಿಣಮಿಸುತ್ತಿತ್ತು. ಧರ್ಮದರ್ಶಿಗಳು ತಮ್ಮ ತಮ್ಮ ದಿನನಿತ್ಯದ ಕೆಲಸಗಳ ಜವಾಬ್ದಾರಿಯನ್ನು ಬದಿಗಿಟ್ಟು ಟ್ರಸ್ಟ್ ಮೇಲಿನ ಅಭಿಮಾನದಿಂದ ದೂರದ ಊರುಗಳಿಂದ ಉತ್ಸಾಹದಿಂದ ಬರುತ್ತಿದ್ದರು. ಎಲ್ಲರೂ ತಮ್ಮ ತಮ್ಮ ಖರ್ಚಿನಲ್ಲಿಯೇ ಬಂದು ಹೋಗುತ್ತಿದ್ದರು. ಕೆಲವೊಂದು ಸಲ ಪತ್ನಿಯರನ್ನು, ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದರು. ಯಾವ ಸದಸ್ಯರಿಗು ಯಾವತ್ತೂ ಪ್ರವಾಸ ಖರ್ಚನ್ನಾಗಲಿ, ದಿನಭತ್ಯೆಯನ್ನಾಗಲಿ ಕೊಟ್ಟಿದ್ದಿಲ್ಲ. ಧರ್ಮದರ್ಶಿಗಳು ಟ್ರಸ್ಟಿನ ಬೆಳವಣಿಗೆಯ ದೃಷ್ಟಿಯಿಂದ ತಮ್ಮೊಂದಿಗೆ ಕೆಲ ಹಿತೈಶಿಗಳನ್ನು ಕೂಡ ಕರೆದುಕೊಂಡು ಬರುತ್ತಿದ್ದರು. ಎಲ್ಲರಲ್ಲಿಯು ಟ್ರಸ್ಟಿನ ಧ್ಯೇಯೋದ್ದೇಶಗಳ ಬಗ್ಗೆ ಅಭಿಮಾನವಿತ್ತು; ಅದಕ್ಕಗಿ ಕೆಲಸ ಮಾಡುವ ಬದ್ಧತೆ ಇತ್ತು. ಈ ವಿಚಾರಗಳಲ್ಲದೆ ಅನ್ಯ ಯಾವ ವಿಚಾರವು ಅವರ ಮನಸ್ಸಿನಲ್ಲಿ ಇರುತ್ತಿರಲಿಲ್ಲ. ಆದ್ದರಿಂದ ಎಲ್ಲ ತೀರ್ಮಾನಗಳು ಸರ್ವಾನುಮತದಿಂದ ಆಗುತ್ತಿದ್ದವು. ಕೆಲ ಸಂಸ್ಥೆಗಳಲ್ಲಿ ಕಂಡು ಬರುವ ರಾಜಕೀಯದ ಅಥವಾ ಅನಪೇಕ್ಷಿತ ವಿಚಾರದ ಗಾಳಿ ಇರಲಿಲ್ಲ. ಸ್ಥಾನಮಾನಗಳಿಗೆ ಪೈಪೋಟಿಯೆ ಇರಲಿಲ್ಲ. ಆಗ್ರಹ ಪೂರ್ವಕವಾಗಿ ಪದಾಧಿಕಾರಿಗಳನ್ನಾಗಿ ಮಾಡಬೇಕಾಗುತ್ತಿತ್ತು. ಧರ್ಮದರ್ಶಿ ಮಂಡಲಿಯ ಸಭೆ ನಿಯಮಾನುಸಾರ ನಡೆಯುತ್ತಿತ್ತು. ಆದರೂ ಸಭೆ ನಡೆಯದ ಮಧ್ಯದ ಅವಧಿಯಲ್ಲಿ "ವಾರದ ಪತ್ರದ ಮೂಲಕ" ಧರ್ಮದರ್ಶಿಗಳಿಗೆ ಜನಪದ ನಿಲಯದ ಅಂತರಂಗದಲ್ಲಿ ಆಗುತ್ತಿದ್ದ ಬೆಳವಣಿಗೆಗಳನ್ನು ತಿಳಿಸಲಾಗುತ್ತಿತ್ತು. ಎಲ್ಲ ಸದಸ್ಯರು ಪರಸ್ಪರ ಸೌಹಾರ್ದತೆಯಿಂದ ಕೆಲಸ ಮಾಡಿದ್ದರಿಂದಲೇ ಜನಪದ ಸೇವಾ ಟ್ರಸ್ಟ್ ೫೫ ವರ್ಷಗಳಿಂದ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವುದಕ್ಕೆ ಸಾಧ್ಯವಾಗಿದೆ. ಈ ಸಂದರ್ಭದಲ್ಲಿ ಜನಪದ ನಿಲಯದ ಪಾತ್ರವನ್ನು ನೆನೆಯುವುದು, ನೆನಪಿನ ದಾರಿಯಲ್ಲಿ ಹೋಗುವುದು ಉಚಿತವೆನಿಸುತ್ತದೆ. ಅಲ್ಲದೆ ಈ ಮನೆಯನ್ನು ಕಟ್ಟಿದ ಪೂರ್ವಜರನ್ನು ಕೃತಜ್ಞತಾಭಾವದಿಂದ ನೆನೆಯಲೇ ಬೇಕಾಗುತ್ತದೆ. ಅವರ ಸದ್ಭಾವನೆಯ ಫಲದಿಂದ ನಿರ್ಮಾಣವಾದ ಈ ಮನೆಗೆ ಬಂದವರ ಹಾಗೂ ಭೇಟಿ ಕೊಟ್ಟವರ ಮನಸ್ಸನ್ನು ಅರಳಿಸುತ್ತಾ ಬಂದಿದೆ. ಕಟ್ಟಡದ ವಿಶಾಲತೆ, ವಿನ್ಯಾಸ, ಅಂಗಳ ಮತ್ತು ಹಿತ್ತಲು ಇವು ಬಂದವರ ಮೆಚ್ಚುಗೆಗೆ ಪಾತ್ರವಾಗುತ್ತಾ ಬಂದಿವೆ. ಬೇಸಿಗೆಯಲ್ಲಿ ಬಂದಂಥಹ ಸ್ನೇಹಿತರಿಗೆ ಈ ಮನೆ ಪ್ರಾಕೃತಿಕವಾಗಿ ಹವಾ ನಿಯಂತ್ರಿತ ಮನೆಯಿದ್ದಂತೆ

ಅನುಭವಕ್ಕೆ ಬಂದಿದೆ. ಅದಕ್ಕಾಗಿ ಅವರು ಸಂತೋಷ ಪಟ್ಟಿದ್ದಾರೆ. ನಗರಗಳಿಂದ ಬಂದಂಥವರು ಈ ರೀತಿ ವಿನ್ಯಾಸದ ಮನೆಯನ್ನು ಬೆಂಗಳೂರಿನಲ್ಲಿ ಹೊಂದುವುದು ಕಷ್ಟಸಾಧ್ಯವೆಂದು ಉದ್ಗಾರತೆಗೆಯುತ್ತಾರೆ. ಅವರೊಂದಿಗೆ ಮಕ್ಕಳೇನಾದರು ಬಂದಿದ್ದರೆ ಮನೆಯಲ್ಲಿಯ ಮತ್ತು ಸುತ್ತಮುತ್ತಲಿನ ವಿಶಾಲ ಜಾಗವನ್ನು ನೋಡಿ ಆಟವಾಡಲಾರಂಭಿಸುತ್ತಾರೆ. ಹಿತ್ತಲಲ್ಲಿರುವ ರಾಟೆಯ ಬಾವಿ ಮತ್ತು ದೊಡ್ಡ ವರದಕಲ್ಲು ಆಕರ್ಷಣೀಯ ವಸ್ತುಗಳಾಗುತ್ತವೆ. ಮನೆಯೊಳಗಿರುವ ಮರದ ನಾಲ್ಕು ಕಂಬಗಳು ಹಾಗೂ ಹಲಿಗೆ ಸೇವೆ ಜಗಲಿಯ ಮೇಲಿರುವ ಎಂಟು ಕಂಬಗಳು ಹುಡುಗರ ಆಟಕ್ಕೆ ಪ್ರೋತ್ಸಾಹ ಕೊಡುತ್ತವೆ. ಮಣ್ಣಿನಿಂದ ಸುಮಾರು ಒಂದೂವರೆ ಅಡಿ ಅಗಲದ ಗೋಡೆಗಳು, ಪೂರ್ವ ಮತ್ತು ಪಶ್ಚಿಮಕ್ಕಿರುವ ಪ್ರವೇಶ ಬಾಗಿಲುಗಳು, ಸಾಕಷ್ಟು ಗಾಳಿ ಮತ್ತು ಬೆಳಕು ಬರಬಹುದಾದ ರೀತಿಯಲ್ಲಿ ಸ್ಥಾಪಿತವಾಗಿರುವ ನಲ್ವತ್ತನಾಲ್ಕು ಕಿಟಕಿಗಳು ಮನಸ್ಸಿಗೂ ಮತ್ತು ದೇಹಕ್ಕೂ ಹಿತವನ್ನುಂಟುಮಾಡುತ್ತವೆ. ಹಿತ್ತಲಲ್ಲಿರುವ ಹಳೆಯದಾದ ಬೇಲದ ಮರ ಸದಾ ಹಸಿರಾಗಿ ಕಂಗೊಳಿಸುತ್ತಿರುತ್ತದೆ. ವಸಂತ ಋತುವಿನಲ್ಲಿ ಕೋಗಿಲೆಗಳು ಬಂದು ತಮ್ಮ ನಿರಂತರ ಕೂಗನ್ನು ಹಾಕುತ್ತಿರುತ್ತದೆ. ಬೇಸಿಗೆಯ ಸಮಯದಲ್ಲಿ ಗಿಡದ ತುಂಬ ಬಿಡುವ ಬೇಲದ ಹಣ್ಣುಗಳು ನಿಲಯಕ್ಕೆ ಬರುವ ಅತಿಥಿಗಳಿಗೆ ಪಾನಕಕ್ಕೆ ಕಾರಣವಾಗುತ್ತದೆ. ಊರಿನ ಶಾಲಾ ಮಕ್ಕಳು ವಿಶೇಷವಾಗಿ ಪ್ರಾಥಮಿಕ ಶಾಲಾ ಮಕ್ಕಳು ಬೇಲದ ಹಣ್ಣನ್ನು ಕೇಳಿಕೊಂಡು ಬರುವ ಸಂಭ್ರಮ ಉಂಟಾಗುತ್ತದೆ. ಅವರೆಲ್ಲರು ಸಾಲಾಗಿ ಬಂದು ಬುಟ್ಟಿಯಲ್ಲಿಟ್ಟ ಬೇಲದ ಹಣ್ಣನ್ನು ತೆಗೆದುಕೊಂಡು ಹೋಗುತ್ತಾರೆ. ಈ ಸಂಭ್ರಮ ಮೂರು ನಾಲ್ಕು ತಿಂಗಳವರೆಗೆ ನಡೆಯುತ್ತದೆ. ಇತ್ತೀಚೆಗೆ ಜನಪದ ನಿಲಯದಲ್ಲಿ ನಡೆಯುವ ಸಂಭ್ರಮದ ಮತ್ತು ಸಂತೋಷದ ವಿಷಯ ಅನಾಥ ಮಕ್ಕಳಿಗೆ ಉಜ್ವಲ ಭವಿಷ್ಯ ಮಾಡಿಕೊಡುವ ಪ್ರಯತ್ನ. ಇದುವರೆಗೆ ಅಂದರೆ ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು ೩೦ ಮಕ್ಕಳನ್ನು ಸಂತಾನ ಹೀನ ಸುಯೋಗ್ಯ ಮತ್ತು ಅರ್ಹ ದಂಪತಿಗಳಿಗೆ ದತ್ತು ಕೊಡಲಾಗಿದೆ. ದತ್ತು ಕೊಡುವ ದಿನ ಜನಪದ ನಿಲಯದಲ್ಲಿ ಹರ್ಷದ ವಾತಾವರಣವಿರುತ್ತದೆ. ತಾಯಿಗೆ ದತ್ತು ಕೊಡುವ ಔಪಚಾರಿಕ ಕೆಲಸವನ್ನು ವಿಶೇಷವಾಗಿ ಗಿರಿಜಾ ಕೌಲಗಿಯವರು ಮಾಡುತ್ತಾರೆ. ದತ್ತು ಸ್ವೀಕರಿಸಲ್ಪಟ್ಟ ಮಕ್ಕಳು ಈಗ ಒಳ್ಳೆಯ ರಿತಿಯಲ್ಲಿ ಬೆಳೆಯುತ್ತಿದ್ದಾರೆ ಮತ್ತು ಶಿಕ್ಷಣ ಪಡೆಯುತ್ತಿದ್ದಾರೆ. ಜನಪದ ನಿಲಯಕ್ಕೆ ಭೇಟಿ ಕೊಟ್ಟ ಮಹನೀಯರ ವಿಷಯವನ್ನು ಈ ಮೊದಲು ತಿಳಿಸಲಾಗಿದೆ. ಸಾಹಿತಿಗಳು, ಸಮಾಜಸೇವಕರು, ಪರಿಸರವಾದಿಗಳು, ಕಲಾಕಾರರು, ರೈತರು ಮತ್ತು ಸಮಾಜದ ಎಲ್ಲ ವರ್ಗದ ಜನರು ಜನಪದ ನಿಲಯಕ್ಕೆ ಭೇಟಿಕೊಟ್ಟು ತಮ್ಮೆಲ್ಲರ ಪಾದ ಧೂಲಿಯಿಂದ ಪವಿತ್ರಗೊಳಿಸಿದ್ದಾರೆ, ಇತಿಹಾಸ ಬರೆದಿದ್ದಾರೆ. ಎಲ್ಲ ಆಗಂತುಕರಲ್ಲಿ ವಿಶೇಷ ಆಗಂತುಕರಾಗಿ ಆಚಾರ್ಯ ವಿನೋಬಾ ಭಾವೆ ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣರ ಹೆಸರು ಚಿರಸ್ಥಾಯಿಯಾಗಿರುತ್ತದೆ. ಮನೆಯಲ್ಲಿದ್ದೆ ಸೂರ್ಯಾಸ್ತ ಮತ್ತು ಸುರ್ಯೋದಯಗಳನ್ನು ನೋಡುವ ಅವಕಾಶ ಕಲ್ಪಿಸಿರುವ ಜನಪದ ನಿಲಯವು ರಾಷ್ಟ್ರಕವಿ ಕುವೆಂಪುರವರು ಹಾಡಿರುವ ಆಶಯದಂತೆ "ನಾಡಿನ ಪುಣ್ಯದ ಪೂರ್ವ ದಿಗಂತದಿ ಚಿರ ನೂತನ ಉತ್ಸಾಹದಿ ನವೀನ ಜೀವನ" ಚಿಮ್ಮುವಂತೆ ಮಾಡಲೆಂದು ಹಾರೈಸುತ್ತೇನೆ.

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘ (ಅಖಿಲ ಭಾರತ ಸರ್ವೋದಯ ಮಂಡಲ) ದ ಮುಂದಿನ ಕಾರ್ಯಕಾರಿ ಸಮಿತಿಯ ಸಭೆ ೨೦೧೫ರ ಜುಲೈ ಮಾಹೆಯಲ್ಲಿ ೧೨ ಮತ್ತು ೧೩ನೇ ತಾರೀಕುಗಳಂದು (ಭಾನುವಾರ ಮತ್ತು ಸೋಮವಾರ) ದಂದು ನಡೆಯುವುದು, ಸಭೆಯು ಗುಜರಾತಿನ ರಾಜಕೋಟ್ ಜಿಲ್ಲೆಯಲ್ಲಿರುವ ಗೋಂಡಲ್ ಎಂಬ ಊರಲ್ಲಿ ನಡೆಯುವುದು. ಸಭೆ ನಡೆಯುವ ಸ್ಥಳ ಬ್ರಹ್ಮ ಕ್ಷತ್ರಿಯ ವಾಡಿ. ಈ ಸಭೆಯಲ್ಲಿ ರಾಜಸ್ಥಾನದ ಖಿಮೇಲ್ ಎಂಬಲ್ಲಿ ನಡೆದಿದ್ದ ಸಭೆಯ ಕಾರ್ಯಕಲಾಪಗಳನ್ನೂ ಮತ್ತು ಅಲ್ಲಿಯ ತೀರ್ಮಾನಗಳ ಅನುಷ್ಠಾನ ಕುರಿತು ಚರ್ಚಿಸಲಾಗುವುದು. ಸಂಘದ ಮಾಹಾಕಾರ್ಯದರ್ಶಿಯ ವರದಿಯನ್ನು ಪರಿಶೀಲಿಸಲಾಗುವುದು. ೪೬ನೇ ಸರ್ವೋದಯ ಸಮಾಜ ಸಮ್ಮೇಳನ ಮತ್ತು ಮುಂದಿನ ಅಧಿವೇಶನದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಸಂಘದ ವಿವಿಧ ಸಮಿತಿಗಳ ವರದಿಗಳನ್ನು ಪರಾಮರ್ಶಿಸಲಾಗುವುದು ಹಾಗೂ ಅಧ್ಯಕ್ಷರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಡುವ ವಿಷಯಗಳನ್ನು ಚರ್ಚಿಸಲಾಗುವುದು. ಆನಂತರ ದೇಶದಲ್ಲಿರುವ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಚರ್ಚೆ ಮತ್ತು ಅದಕ್ಕನುಗುಣವಾದ ಮುಂದಿನ ಕಾರ್ಯಕ್ರಮದ ಬಗ್ಗೆ ತೀರ್ಮಾನ ಸಹ ಕೈಗೊಳ್ಳಲಾಗುವುದು.

******

ರಾಜ್ಯ ಸರ್ವೋದಯ ಮಂಡಲಿಗಳ ಅಧ್ಯಕ್ಷರು ಸರ್ವ ಸೇವಾ ಸಂಘದ ಕಾರ್ಯಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಸಭೆಗಳಲ್ಲಿ ಅವರೊಂದಿಗೆ ವಿಚಾರ ವಿನಿಮಯ ಆಗುತ್ತಿರುತ್ತದೆ. ರಾಜ್ಯ ಸರ್ವೋದಯ ಮಣಡಲಿಗಳ ಕಾರ್ಯದರ್ಶಿಗಳು ವಾಸ್ತವದಲ್ಲಿ ಅವರೇ ಕಾರ್ಯಕಲಾಪಗಳ ಶಕ್ತಿ ಆಗಿರುತ್ತಾರೆ. ಅವರೊಂದಿಗೆ ಚರ್ಚೆ ಆಗುವುದೇ ಇಲ್ಲ. ಆದರೆ ಅವರೊಂದಿಗೆ ಚರ್ಚೆ ಆಗಬೇಕಾದುದು ಅಗತ್ಯ. ಇದನ್ನು ಗಮನದಲ್ಲಿರಿಸಿಕೊಂಡು ಎಲ್ಲ ರಾಜ್ಯ ಮಂಡಲಿಗಳ ಮತ್ತು ಸರ್ವೋದಯ ಮಿತ್ರ ಮಂಡಲಿಗಳ ಅಧ್ಯಕ್ಷ, ಕಾರ್ಯದರ್ಶಿಯವರ ಪ್ರತ್ಯೇಕ ಸಭೆ ಏರ್ಪಡಿಸಲಾಗಿದೆ. ಸರ್ವ ಸೇವಾ ಸಂಘದ ಪದಾಧಿಕಾರಿಗಳೂ ಕೂಡ ಸಭೆಯಲ್ಲಿ ಹಾಜರಿದ್ದು ಚರ್ಚೆಯಲ್ಲಿ ಭಾಗವಹಿಸುವರು. ಕಾರ್ಯದರ್ಶಿಗಳ ಈ ಸಭೆ ೨೦೧೫ ಜುಲೈ ೧೫ರಂದು ಮಧ್ಯಾಹ್ನ ೨ ಗಂಟೆಯಿಂದ ಪ್ರಾರಂಭವಾಗುವುದು. ಸಭೆ ನಡೆಯುವ ಸ್ಥಳ ಬ್ರಹ್ಮ ಕ್ಷತ್ರಿಯವಾಡಿ, ಗೋಂಡಲ್, ರಾಜಕೋಟ್ ಜಿಲ್ಲೆ, ಗುಜರಾತ್ ರಾಜ್ಯ. ಈ ಸಭೆಯಲ್ಲಿ ಭಾಗವಹಿಸಲು ರಾಜ್ಯ ಸರ್ವೋದಯ ಮಂಡಲಿಗಳಿಂದ ಇಬ್ಬರು ಹಿರಿಯ

ಕಾರ್ಯಕರ್ತರನ್ನು ಸಹ ಕರೆದುಕೊಂಡು ಬರಬೇಕಾಗಿ ವಿನಂತಿ. ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳಿಸಿದಲ್ಲಿ ಅವರಿಗೂ ಕೂಡ ನೇರವಾಗಿ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗುವುದು. ಪ್ರದೇಶ್ ಸರ್ವೋದಯ ಮಂಡಲಿಗಳ ಕಾರ್ಯದರ್ಶಿಗಳಿಗೆ ೨೦೧೫ ಜುಲೈ ೧೨ ಮತ್ತು ೧೩ರಮದು ನಡೆಯುವ ಸರ್ವ ಸೇವಾ ಸಂಘದ ಸಭೆಗೂ ಆದರ ಪೂರ್ವಕವಾದ ಆಹ್ವಾನವಿದೆ.

******

ರಾಜಕೋಟಿಗೆ ದೇಶದ ಅನೇಕ ಭಾಗಗಳಿಂದ ನೇರ ರೈಲು ಸಂಪರ್ಕವಿದೆ. ಗೊಂಡಲ್ ಎಂಬ ಊರು ರಾಜಕೋಟ್‌ನಿಂದ ನಲ್ವತ್ತು ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಗೆ ಇಡೀ ದಿವಸ ಬಸ್ಸುಗಳು ಓಡಾಡುತ್ತವೆ. ಗೊಂಡಲ್ ರೈಲ್ವೆ ಸ್ಟೇಷನ್‌ನಿಂದ ಸಭಾಸ್ಥಳ ಒಂದು ಕಿಲೋಮೀಟರ್ ದೂರದಲ್ಲಿದೆ. ಆಟೋರಿಕ್ಷಾ ಬಾಡಿಗೆ ಹತ್ತು ರೂಪಾಯಿಗಳಿಂದ ಹದಿನೈದು ರೂಗೆಳು. ಸಂಪರ್ಕಿಸಬೇಕಾದ ವ್ಯಕ್ತಿ ಶ್ರೀ.ಬೇಚರ್‌ಭಾಯಿ ಪಟೇಲ್ : ದೂವಾಣಿ ಸಂಖ್ಯೆ ೯೯೯೮೮೯೮೯೮೯೧ ಮತ್ತು ಶ್ರೀ.ಮಗನ್‌ಭಾಯಿ ದೂರವಾಣಿ ಸಂಖ್ಯೆ : ೯೭೨೩೮೦೦೧೨೩.

ಮಗುವಿನ ಅಳಲು

ನೀಲ ಗಗನದಿ ಹಾರುತಿಯ ಹಳದಿ ಹಸಿರಿನ,
ಕೆಂಪು ಕೊಕ್ಕಿನ ಗಿಳಿಗಳ ಕಂಡೆಯಾ–ಮಗುವೆ?
ಇಲ್ಲ ಅಯ್ಯಾ ,
ಆಗಸದಿ ಉದಯಿಸಿಹ ಹೊಂಬಣ್ಣದ ರವಿಯ ಕಂಡೆಯಾ–ಮಗುವೆ ?
ಇಲ್ಲ ಅಯ್ಯಾ ,
ಹಸಿರು ಬನದಲಿ ಬಣ್ಣ ಬಣ್ಣದ ಹೂಗಳ ಕಂಡೆಯಾ–ಮಗುವೆ?
ಇಲ್ಲ ಅಯ್ಯಾ ,
ಸಾಗರದ ಅಂಚಿಗೆ ಅಪ್ಪಳಿಸುವ ಬಿಳಿ ತೊರೆಗಳ ಕಂಡೆಯಾ–ಮಗುವೆ?
ಇಲ್ಲ ಅಯ್ಯಾ
ಕಂಡೆ ಏನ ನನ ಕಂದ?
ನಾ ಕಂಡದ್ದು ಮೂರೇ ಬಣ್ಣ – ಅಯ್ಯಾ!
ಕಪ್ಪು ಬಣ್ಣದ ಪಾಟಿ !
ಬಳಿಯ ಬಣ್ಣದ ಬಳಪ !
ಕೆಂಪು ಕಣ್ಣಿನ ಗುರುವ !
ನನ್ನ ಸೂರ ಹೊರಗಿನ ಬಣ್ಣಬಣ್ಣದ ಇಳೆಯ
ತೋರೆಯಾ ತೋರೆಯಾ.

– ಚನ್ನಗಿರಿ ತಿರುಮಲರಾವ್

ಸಾದರ ~ ಸ್ವೀಕಾರ

೧) **ಪುಸ್ತಕದ ಹೆಸರು : ಇಸ್ಲಾಂ ಧರ್ಮ ಸಂದೇಶ**
ಲೇಖಕರು : ವಿನೋಬಾ
ಅನುವಾದ : ಸಿದ್ಧಾರಾಮ ಸ್ವಾಮಿಗಳು
ಪ್ರಕಾಶಕರು : ವಿರಕ್ತಮಠ ದೇಶನೂರ್, ತಾಲ್ಲೂಕು ಬೈಲಹೊಂಗಲ, ಜಿಲ್ಲಾ ಬೆಳಗಾವಿ
ಪುಟ : ೧೩೮, ಬೆಲೆ : ೬೦/-

೧೨ ಅಧ್ಯಾಯಗಳಲ್ಲಿ ಇಸ್ಲಾಂ ಧರ್ಮದ ಪೂರ್ಣ ಪರಿಚಯವನ್ನು ಈ ಪುಸ್ತಕ ಮಾಡಿಕೊಡುತ್ತದೆ. ಪ್ರತಿಯೊಂದು ಪುಸ್ತಕಾಲಯದಲ್ಲಿ ಇರಬೇಕಾದ ಗ್ರಂಥ.

೨) **ಪುಸ್ತಕದ ಹೆಸರು : ಸಮಾಜವಾದ ವಾದ'–ವಿವಾದ**
ಲೇಖಕರು : ಬಾಪು ಹೆದ್ದೂರಶೆಟ್ಟಿ
ಪ್ರಕಾಶಕರು : ಅನ್ವೇಷಣೆ, ಚಿಕ್ಕಲಸಂದ್ರ, ಬೆಂಗಳೂರು
ಪುಟ : ೨೪೮, ಬೆಲೆ : ೨೦೦/-

ಮೊದಲಿನ ಹತ್ತು ಅಧ್ಯಾಯಗಳು ಸಮಾಜವಾದದ ಪರಿಚಯವನ್ನು ಕೊಡುವುದರ ಜೊತೆಗೆ ಅದರ ಸೋಲು ಗೆಲುವುಗಳನ್ನು ದಾಖಲಿಸಲಾಗಿದೆ. ಸಮಾಜವಾದದ ಮುನ್ನೋಟದ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ವಾದ – ವಿವಾದ ವಿಭಾಗದಲ್ಲಿ ಕರ್ನಾಟಕ ರಾಜ್ಯದಲ್ಲಿಯ ಪ್ರಮುಖ ಸಮಾಜವಾದಿಗಳ ಮಧ್ಯೆ ನಡೆದ ವಾದ – ವಿವಾದ ಕುರಿತು ಪತ್ರೋತ್ತರ ಇವೆ.

೩) **ಪುಸ್ತಕದ ಹೆಸರು : ಭಕ್ತಿ ದರ್ಶನ**
ಲೇಖಕರು : ವಿನೋಬಾ
ಅನುವಾದ : ಸಿದ್ಧಾರಾಮ ಸ್ವಾಮಿಗಳು
ಪ್ರಕಾಶಕರು : ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣಕೇಂದ್ರ, ಶಿವಬಸವನಗರ, ಬೆಳಗಾವಿ–೫೯೦ ೦೧೦
ಪುಟ : ೩೦೨, ಬೆಲೆ : ೨೦೦/-

ನಮಗೆ ಅಂತರಂಗದ ಭಕ್ತಿಯ ಜಲ ಮತ್ತು ಬಹಿರಂಗದ ತಪಸ್ಸಿನ ಬಿಸಿಲು ಪ್ರಾಪ್ತವಾದರೆ ಹಸಿರು ವೃಕ್ಷಗಳಂತೆ ನಾವು ಕೂಡ ನಳನಳಿಸುವೆವು ಎಂಬೀ ವಿನೋಬಾರ ಮಾತಿನ ಗುಟ್ಟನ್ನು ಅರಿಯಬೇಕಾದಲ್ಲಿ ಈ ಪುಸ್ತಕದ ಓದು ಅವಶ್ಯಕ

ಹಿರಿಯ ಸರ್ವೋದಯ ಕಾರ್ಯಕರ್ತ : ಚಿನ್ಮಯ ವ್ಯಾಸ್

೮೨ ವರ್ಷದ ಚಿನ್ಮಯ ವ್ಯಾಸ್ ಇಂದೂ ಕೂಡ ಕ್ರಿಯಾಶೀಲರಾದ ಸರ್ವೋದಯ ಕಾರ್ಯಕರ್ತರಾಗಿದ್ದಾರೆ. ಮೂಲತಃ ಮಧ್ಯಪ್ರದೇಶದವರಾದ ಚಿನ್ಮಯ ವ್ಯಾಸರು ಇಂದೋರ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿದರು. ನಂತರ ದೆಹರಾದೂನಿನಿಂದ ಸಾಲಷ್ಟು ದೂರದಲ್ಲಿರುವ ಗ್ರಾಮ ಮೂಲದೇವತ ಎಂಬಲ್ಲಿ ನೆಲೆಸಿ ಸಮಾಜಸೇವೆ ಮತ್ತು ಶ್ರಮ ಆಧಾರಿತ ಕೆಲಸದಲ್ಲಿ ತೊಡಗಿಕೊಂಡರು. ಅವರು ಸರ್ವೋದಯಿ ಕಾರ್ಯಕರ್ತರಾಗಿದ್ದರಿಂದ ಅವರ ಮೇಲೆ ಗಾಂಧೀ – ವಿನೋಬಾರವರ ಪ್ರಭಾವ ಕಡ್ಡಾಯವಾಗಿ ಆಯಿತು. ಸೇವೆಯ ಭಾವನೆಯನ್ನು ಮನಸ್ಸಿನಲ್ಲಿ ತುಂಬಿಕೊಂಡು ಸೇವೆಯ ಮಾರ್ಗವನ್ನು ಹೇಗೆ ಚಿತ್ತ ಶುದ್ಧಿಯ ಮಾರ್ಗವನ್ನಾಗಿ ಮಾಡಿಕೊಳ್ಳಬಹುದೆಂಬುದನ್ನು ವ್ಯಾಸರವರಿಂದ ಕಲಿಯಬೇಕು. ಗಾಂಧೀ – ವಿನೋಬಾರ ಹೇಳಿದ್ದ ಸೇವಾಭಾವನೆಯನ್ನು ಇಟ್ಟುಕೊಂಡಿರುವ ಇವರು ಪ್ರಯೋಗ ಶೀಲ ವ್ಯಕ್ತಿಯಾಗಿದ್ದಾರೆ. ಆಧ್ಯಾತ್ಮ ಮತ್ತು ದರ್ಶನ ಶಾಸ್ತ್ರದಲ್ಲಿ ಅಭಿರುಚಿ ಇಟ್ಟುಕೊಂಡಿದ್ದಾಗ್ಯೂ ಸಾಂಪ್ರದಾಯಿಕತೆ, ಆಡಂಬರ, ಪ್ರಾಂತೀಯತೆ, ಜಾತಿವಾದ, ಭಾಷಾವಾದದಂತಹ ವಿಚಾರಗಳಿಂದ ತಮ್ಮನ್ನು ದೂರವಿರಿಸಿಕೊಂಡಿದ್ದಾರೆ. ಅವರಿಗೆ ಈ ಉದಾತ್ತ ವಿಚಾರಗಳು ಮತ್ತು ಸ್ವಭಾವ ಅವರ ತಂದೆ – ತಾಯಿಗಳಿಂದ ದೊರೆಯಿತು. ಈ ಗುಣಗಳನ್ನು ಅವರು ಹಿರಿಯ ಸರ್ವೋದಯ ಕಾರ್ಯಕರ್ತೆಯಾಗಿದ್ದ ಸರಳ ಬೆಹೆನ್ ಅವರ ಸಮೀಪದಲ್ಲಿ ಇದ್ದು ಬೆಳೆಸಿಕೊಂಡರು. ಈ ಸ್ವಭಾವ ಅವರ ಪತ್ನಿ ಕಲಾವತಿಯಲ್ಲಿ ಕೂಡ ಇದ್ದವು. ತಮ್ಮ ಈ ಸ್ವಭಾವವನ್ನು ಅವರು ತಮ್ಮ ಮಗ ಆಶೀಷನಿಗೆ ಬಳುವಳಿಯಾಗಿ ಕೊಟ್ಟಿದ್ದಾರೆ. ಆತ ಕೃಷಿಯೊಂದಿಗೆ ಸಮಾಜಸೇವೆಯಲ್ಲಿ ತೊಡಗಿದ್ದಾನೆ. ಈಗಲೂ ಕೂಡ ಚಿನ್ಮಯ ವ್ಯಾಸರು ಯಥಾಶಕ್ತಿ ಅಧ್ಯಯನ, ಗ್ರಾಮಸೇವೆ ಮತ್ತು ಸದ್ ಸಾಹಿತ್ಯದ ಪ್ರಚಾರದ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ತಮ್ಮ ಸೇವಾ ಕ್ಷೇತ್ರದ ಅನುಭವಗಳನ್ನು "ಸೇವೆಯ ಅನುಭವ" ಎಂಬ ಹೆಸರಿನಲ್ಲಿ ಕಳೆದ ವರ್ಷ ಒಂದು ಪುಸ್ತಕ ಬರೆದಿದ್ದಾರೆ. ಅದನ್ನು ಜಿಲ್ಲಾ ಸರ್ವೋದಯ ಮಂಡಲ ಡೆಹರಾಡೂನ್ ಅವರು ಪ್ರಕಟಿಸಿದ್ದಾರೆ.

ಸರ್ವೋದಯ ಸಮಾಜದತ್ತ ಕಾರ್ಯಕರ್ತರು ಮುನ್ನಡೆಯುವ ಮಾರ್ಗ

ಶುಭ ಸಂಕಲ್ಪಕ್ಕಾಗಿ ಶುಭದಿನದ ಪ್ರತೀಕ್ಷೆ ಮಾಡಬೇಡಿ. ಯಾವ ದಿವಸ ಶುಭ ಸಂಕಲ್ಪ ಮಾಡಲಾಗುತ್ತದೋ ಅದೇ ಸರ್ವೋತ್ತಮ ಶುಭ ದಿನ. ಹೀಗೆ ಯೋಚಿಸಿ ತಕ್ಷಣ ಕೆಲಸ ಆರಂಭಿಸಿ.

******

ವಾಣಿಯಲ್ಲಿ ನಮ್ರತೆ. ಚಿತ್ತದಲ್ಲಿ ದೃಢತೆ ಮತ್ತು ಬುದ್ಧಿಯಲ್ಲಿ ವ್ಯಾಪಕತೆ ಇಟ್ಟುಕೊಂಡು ನಿಮ್ಮ ಕೆಲಸ ಮಾಡುತ್ತ ಹೋಗಿ. ಕೆಲಸ ಭಗವಂತನ ಕೃಪೆಯಿಂದ ಆಗುವುದು, ನಾವು ನಿಮಿತ್ತರಾಗುವೆವು.

******

ನಮ್ಮ ಸ್ವರೂಪವನ್ನು ನಮಗೆ ತೋರಿಸುವ ಕನ್ನಡಿ ಕೆಲಸ. ಕೆಲಸದ ಬಲದಿಂದ ನಮ್ಮ ಮನಸ್ಸಿನ ಪಾಪ ಮತ್ತು ದೋಷ ಹೊರಗೆ ಬರುತ್ತವೆ. ಆದ್ದರಿಂದ ಕೆಲಸ ಮಾಡುತ್ತಲೇ ಇರಿ. ಮತ್ತು ನಿರ್ಮಲವಾಗುವ ನಿರಂತರ ಪ್ರಯತ್ನ ಮಾಡುತ್ತ ಹೋಗಿ.

******

ಯಾರು ನಮ್ಮ ಸೇವೆಯ ಯೋಗ್ಯರಾಗಿದ್ದಾರೊ ಅವರ ಸೇವೆಯನ್ನು ಆದರ ಪೂರ್ವಕವಾಗಿ ಮಾಡುವುದು ಮನುಷ್ಯನ ಕರ್ತವ್ಯವಾಗಿದೆ. ಸೇವೆಗಾಗಿ ಯಾರು ಯೋಗ್ಯರೆಂಬುವವರನ್ನು ಹುಡುಕುತ್ತಾ ಹೋಗುವುದು ಅಗತ್ಯವಿಲ್ಲ. ಯಾರಿಗೆ ಸೇವೆಯ ಅಗತ್ಯವಿದೆಯೋ ಅವರು ಸೇವಾ ಯೋಗ್ಯ.

******

ಯಾವ ತ್ಯಾಗದಿಂದ ಅಭಿಮಾನ ಹುಟ್ಟುತ್ತದೊ ಅದು ತ್ಯಾಗವೇ ಅಲ್ಲ. ತ್ಯಾಗದಿಂದ ಶಾಂತಿ ದೊರೆಯಬೇಕು. ಏಕೆಂದರೆ ಅಭಿಮಾನದ ತ್ಯಾಗವೇ ವಾಸ್ತವಿಕ ತ್ಯಾಗ.

******

ನಮ್ಮ ಬಳಿ ಇರುವ ಜ್ಞಾನವನ್ನು ನಮ್ಮ ಬಳಿಯೇ ಇಟ್ಟುಕೊಳ್ಳುವುದು ಬೇಡ. ಅದರ ಲಾಭ ಎರಡನೇಯವರಿಗೂ ಆಗಲಿ. ಎಲ್ಲರನ್ನು ಜೊತೆತೆಗೆದುಕೊಂಡು ಪ್ರಗತಿ ಮಾಡೋಣ. ಜ್ಞಾನವನ್ನು ಸಂಕುಚಿತ ಗೊಳಿಸದಿರೋಣ.

******

ಸೇವೆ ಮಾಡುವ ಸಾಧಕ. ಬಾಹ್ಯ ಸೇವಾ ಕಾರ್ಯ ಮಾಡುತ್ತಲಿರುವಾಗಲೇ

ಅಂತರಂಗದಲ್ಲಿ ಇರಬಹುದಾದ ಕೊರತೆಯನ್ನು ನೀಗಿಸುವ ಅಗತ್ಯವನ್ನು ಎಂದೂ ಉದಾಸೀನ ಮಾಡಬಾರದು. ಬಹಿರಂಗ ಸೇವಾ ಕಾರ್ಯಕ್ಕೆ ಈ ಅಂತರಂಗದ ಅಗತ್ಯವೇ ಸಾಧನವಾಗಬೇಕು.

******

ಕೆಲಸ ಜಡವು ಆಗಿರಲು ಸಾಧ್ಯ, ಚೈತನ್ಯವಾಗಿರಲೂ ಸಾಧ್ಯ. ನಾವು ಕೆಲಸವನ್ನು ಜಡವಾಗಿ ಮಾಡದಿರೋಣ. ನಮ್ಮ ಕೆಲಸ ಸ್ವಲ್ಪವಾಗಿದ್ದರೂ ಕೂಡ ಶಾಸ್ತ್ರೀಯವಾಗಿರಲಿ, ಸುವ್ಯವಸ್ಥಿತವಾಗಿರಲಿ, ಜ್ಞಾನಮಯವಾಗಿರಲಿ, ಉಪಾಸನಾಮಯವಾಗಿರಲಿ.

******

ದಾರಿ ಸಿಕ್ಕ ಮೇಲೂ ಆ ದಾರಿಯಲ್ಲಿ ಹೋಗದಿದ್ದರೆ ಮನೆಯನ್ನು ತಲುಪುವ ಪ್ರಶ್ನೆಯೇ ಇಲ್ಲ.

******

ಸೇವೆಯಾಗಿರಬಹುದು, ಕೆಲಸವಾಗಿರಬಹುದು, ಧ್ಯಾನವಾಗಿರಬಹುದು, ಅಧ್ಯಯನವಾಗಿರಬಹುದು, ಎಲ್ಲಿಯವರೆಗೆ ಅದು ಭಗವಂತನೊಂದಿಗೆ ಸಂಬಂಧ ಹೊಂದುವುದಿಲ್ಲವೋ ಅಲ್ಲಿಯವರೆಗೆ ಅದು ಪಾರಮಾರ್ಥಿಕವಾಗುವುದಿಲ್ಲ.

ಸಂಗ್ರಹ : ಚಿನ್ಮಯ ವ್ಯಾಸ್ **ಅನು – ಸುರೇಂದ್ರ ಕೌಲಗಿ**

ಹದಿನೆಂಟು ಏಪ್ರಿಲ್ ಭೂ ಕ್ರಾಂತಿ ದಿನದ ನಿಮಿತ್ತ ಸರ್ವ ಸೇವಾ ಸಂಘದ ಅಧ್ಯಕ್ಷರ ಪತ್ರ

ಗೌರವಾನ್ವಿತ ಸಹೋದರ/ಸಹೋದರಿಯರೆ,

ಜೈ ಜಗತ್,

ನಾವು ಏಪ್ರಿಲ್ ಹದಿನೆಂಟನ್ನು "ಭೂ ಕ್ರಾಂತಿ ದಿನ". ದ ರೂಪದಲ್ಲಿ ಆಚರಿಸುತ್ತೇವೆ. ಸಂತ ವಿನೋಬಾ ಆ ದಿನ ಒಂದು ಘೋಷಣೆ ಕೊಟ್ಟಿದ್ದರು – "ಎಲ್ಲ ಭೂಮಿ ಗೋಪಾಲನದು, ಇಲ್ಲ ಯಾರದು ಒಡೆತನ" ಯಾವ ಪ್ರಕಾರ ಸೂರ್ಯನ ಪ್ರಕಾಶ ಮತ್ತು ಗಾಳಿಯ ಮೇಲೆ ಯಾರದೇ ಒಬ್ಬರ ಒಡೆತನ ಇರಲು ಸಾಧ್ಯವಿಲ್ಲವೊ ಅದೇ ಪ್ರಕಾರ ಭೂಮಿಯ ಮೇಲೆ ಒಡೆತನ ಇರಕೂಡದು.

ಈ ಚಿಂತನೆಯ ಆಧಾರದ ಮೇಲೆಯೇ ಗ್ರಾಮ ದಾನದ ವಿಚಾರ ಬಂದಿತ್ತು.

ದೇಶದಲ್ಲಿ ಜಮೀನ್ದಾರಿಯೆನೋ ಮುಗಿಯಿತು; ಆದರೆ ಈಗ ಕಂಪನಿದಾರಿ ಬಂದಿದೆ. ದೇಶೀ–ವಿದೇಶೀ ಕಂಪನಿಗಳಿಗೆ ಸಾವಿರಾರು ಎಕರೆ ಭೂಮಿಯನ್ನು ಇಟ್ಟುಕೊಳ್ಳಲು ಅವಕಾಶಮಾಡಿಕೊಡಲಾಗಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಂಪನಿಗಳಿಗೆ ರೈತರ ಭೂಮಿಯನ್ನು ಸ್ವಾಧೀನಮಾಡಿಕೊಡುತ್ತಿವೆ. ಸರ್ಕಾರ "ಕಂಪನಿಗಳ ಏಜೆಂಟ್" ರೀತಿ ಕೆಲಸ ಮಾಡುತ್ತಿರುವಂತೆ ಅನಿಸುತ್ತಿದೆ. ಅವುಗಳ ಸೂಚನೆಯಂತೆ ಕುಣಿಯುತ್ತಿದೆ. ಭೂ ಸ್ವಾಧೀನ ಅದ್ಯಾದೇಶ ಇದನ್ನು ತೋರಿಸುತ್ತಿದೆ. ಈ ಪ್ರಕ್ರಿಯೆ ನಿಲುಗಡೆಗೆ ಬರದಿದ್ದರೆ ಮುಂದಿನ ದಿನಗಳಲ್ಲಿ ಪುನಃ ಕಂಪನಿ ರಾಜ್ಯ ಪ್ರಾರಂಭವಾಗುವುದು. ಸರ್ವ ಸೇವಾ ಸಂಘ ಸರ್ಕಾರದ ಈ ಕ್ರಮವನ್ನು ಜನದ್ರೋಹಿ ಕ್ರಮವೆಂದು ತಿಳಿಯುತ್ತದೆ.

ದೇಶದ ತುಂಬ ಹಬ್ಬಿರುವ ಪ್ರದೇಶ ಸರ್ವೋದಯ ಮಂಡಲಿಗಳಿಗೆ, ಜಿಲ್ಲಾ ಸರ್ವೋದಯ ಮಂಡಲಿಗಳಿಗೆ, ಸರ್ವೋದಯ ಮಿತ್ರ ಮಂಡಲಿಗಳಿಗೆ, ಲೋಕಸೇವಕರಿಗೆ ಮತ್ತು ಸರ್ವೋದಯ ಮಿತ್ರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಹದಿನೆಂಟು ಏಪ್ರಿಲ್ ರಂದು ಹೆಚ್ಚು ಹೆಚ್ಚು ಸ್ಥಳಗಳಲ್ಲಿ ಸಭೆಗಳನ್ನು ನಡೆಸಿ ಮೇಲ್ಕಾಣಿಸಿದ ಪರಿಸ್ಥಿತಿಯನ್ನು ಜನತೆಗೆ ಎಲ್ಲಿ ಗ್ರಾಮದಾನಿ ಹಳ್ಳಿಗಳಿವೆಯೋ ಅವುಗಳ ಪದಾಧಿಕಾರಿಗಳನ್ನು ಭೇಟಿ ಮಾಡಿ ಗ್ರಾಮ – ವಿರೋಧಿ, ಜನ – ವಿರೋಧಿ ಮತ್ತು ಕಂಪನಿ ಸಮರ್ಥಕ ಭೂಮಿ ಸ್ವಾಧೀನ ಆದೇಶದ ವಿರುದ್ಧ ಠರಾವನ್ನು ಪಾಸುಮಾಡಿ ರಾಷ್ಟ್ರಪತಿಯವರಿಗೆ ಕಳುಹಿಸಬೇಕು. ಅದರ ಒಂದು ಪ್ರತಿಯನ್ನು ಮಾಧ್ಯಮಗಳಿಗೆ ಕೊಡಬೇಕು ಮತ್ತು ನಮ್ಮ ಕಾರ್ಯಾಲಯಕ್ಕೆ ಕಳುಹಿಸಬೇಕು.

– ಮಹದೇವ್ ವಿದ್ರೋಹಿ

ಲಹರಿ

ದೇವರು, ಧರ್ಮ, ಭ್ರಷ್ಟಾಚಾರ

– ಬಿ.ಟಿ.ವಿಶ್ವನಾಥ್

ಬಾಲ್ಯದಲ್ಲಿ ಇಂತಹುದೊಂದು ಅನುಭವ ನಿಮಗೂ ದಕ್ಕಿರಬೇಕು ನೆನಪಿಸಿಕೊಳ್ಳಿ, ಹೆಡಗೆಯಲ್ಲೊ, ಪುಟ್ಟಿಯಲ್ಲೊ, ಬಕೆಟ್ಟಿನಲ್ಲೊ ನೀವು ನಿಮ್ಮ ಊರಿನ ಹಳ್ಳಿಯ ಹಲ್ಲರ್ ಫ್ಲೋರ್ ಮಿಲ್ ಅಥವಾ ಹಿಟ್ಟಿನ ಗಿರಣಿಗೆ ಅಕ್ಕಿ, ರಾಗಿ ಅಥವಾ ಜೋಳ ಅಥವಾ ಇನ್ನಿತರೆ ಧಾನ್ಯ ಒಯ್ದು ಹಿಟ್ಟು ಮಾಡಿಸಿ ತಂದ ಘಟನೆ. ನೀವು ಒಯ್ದ ಧಾನ್ಯದ ತೂಕ, ಅಳತೆ, ಗಿರಣಿಯವನಿಗೆ ಸರಿಯಾಗಿ ಹೇಳಿದ್ದಿದೆಯೇ? ಹತ್ತು ಸೇರಿದ್ದರೆ, ಆರು ಸೇರವೆ ಅಂತ ಹೇಳ್ಲ. ಇದ್ದದ್ದ ಇದ್ದಂಗೇ ಹೇಳ್ತರ ಅಂತ ನಿಮ್ಮ ತಾಯಿಯೋ ತಂದೆಯೋ ನಿಮಗೆ ಗದರಿದ್ದು ನಿಮಗೀಗ ನೆನಪಾಯಿತಲ್ಲವೆ?

ನೀವು ನಿಮ್ಮ ಮೊಬೈಲ್ ಹಿಡಿದು ನಿಮ್ಮ ಮನೆಯ ಹಾಲ್‌ನಲ್ಲಿ ಮಾತನಾಡುತ್ತಿದ್ದೀರಿ. ಹೆಂಡತಿ ಇತ್ ಹಬೆಯಾಡುವ ಇಡ್ಲಿಯ ತಟ್ಟೆ ನಿಮ್ಮ ಮುಂದಿದೆ. ನೀವು ಅತ್ತಿಂದ ಕರೆ ಮಾಡುತ್ತಿರುವವರಿಗೆ ನೀವು ತಿನ್ನುತ್ತಿರುವುದು ಇಡ್ಲಿಯಾದರೂ, ಯಾವುದೋ ಬ್ಥಿಸಿ ಮೀಟಿಂಗ್ ಅಟೆಂಡ್ ಮಾಡುತ್ತಿರುವುದಾಗಿ ಭೋಂಗಿ ಬಿಟ್ಟಿದ್ದು ರೈಲು ಹತ್ತಿಸಿದ್ದು ನೆನಪಿರಬೇಕಲ್ಲವೆ. ಇವೆಲ್ಲ ಏನಂತಹ ಗಹನ ವಿಷಯ, ಭ್ರಷ್ಟಾಚಾರದಂತಹಬೃಹತ್ ಸಮಸ್ಯೆಗೂ ಈ ಘಟನೆಗಳಿಗೂ ಏನು ಸಂಬಂಧ ಅಂದಿರ? ನಿಜಕ್ಕೂ ಇವೆ ಭ್ರಷ್ಟಾಚಾರದ ಬಿತ್ತನೆಗಳು. ನಮಗರಿವಿಲ್ಲದೆ ನಮ್ಮ ನಿಮ್ಮ ಮನೆಗಳಲ್ಲಿ ಇಂತಹ ಬಿತ್ತನೆ ನಿರಂತರ ಸಾಗಿದೆ. ನಾವು ಹೀಗೆ ಮೊಬೈಲ್‌ನಲ್ಲಿ ಭ್ಯೋಂಗಿ ಬಿಟ್ಟಿದ್ದನ್ನು ನಮ್ಮ ನಿಮ್ಮ ಪುಟ್ಟ ಮಕ್ಕಳು ಬೆರಗು ಗಣ್ಣಿನಿಂದ ಗಮನಿಸಿ, ಆಲಿಸಿ ರೆಕಾರ್ಡ್ ಮಾಡಿಕೊಳ್ಳುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಪುಟ್ಟ ಸುಳ್ಳುಗಳನ್ನು ಹೇಳುವುದೇನೂ ಮಹಾಪರಾಧವಲ್ಲ ಎಂದು ಮನೆಯ ಮೊದಲ ಶಾಲೆಯಲ್ಲಿ ನಾವವರಿಗೆ ಹೇಳಿಕೊಡುತ್ತಿದ್ದೀವಲ್ಲವೆ?

ಇದೇ ಮಕ್ಕಳು ಶಾಲೆಯಲ್ಲಿ "ಮೋಹನದಾಸ ಕರಮಚಂದ ಗಾಂಧಿಯವರು" ಎಂದೂ ಸುಳ್ಳು ಹೇಳುತ್ತಿರಲಿಲ್ಲ ಮಕ್ಕಳೇ ನೀವೂ ಸತ್ಯವನ್ನೇ ಹೇಳಬೇಕು ಎಂದ ಮೇಸ್ಟರ ಮಾತನ್ನು ಕೇಳುತ್ತವೆ. "ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು ಬಳಗ, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು" ಎಂದೂ

ಗೋವಿನ ಹಾಡು ಪಠಿಸುತ್ತವೆ. ಗೊಂದಲದಲ್ಲಿ ಬೀಳುತ್ತವೆ. ಮನೆಯಲ್ಲಿ ಮಾಡುವುದು ಸರಿಯೋ? ಶಾಲೆಯಲ್ಲಿ ಕೇಳಿದ್ದು ಸರಿಯೋ? ಬೆಳೆದ ನಾವೆಲ್ಲ ಇಂದು ಮಾಡುತ್ತಿರುವುದನ್ನೇ ಅವೂ ಮಾಡುತ್ತವೆ. ಸತ್ಯ ಹೇಳಿದರೆ ಲಾಭವಾದೆಡೆ ಸತ್ಯ ಹೇಳುತ್ತವೆ. ಸುಳ್ಳು ಹೇಳುವೆಡೆ ಲಾಭ ತಂದರೆ ಸುಳ್ಳುತ್ತವೆ. ಭಾರತ ಇಂತಹ ಇಬ್ಬಂದಿ ಪ್ರಜೆಗಳಿಂದಲೇ ಕಿಕ್ಕಿರಿದಿದೆ. ಈ ಇಬ್ಬಂದಿತನದ ಪಾಪ ಪ್ರಜ್ಞೆ ತೊಳೆದುಕೊಳ್ಳಲು ಗುಡಿ ಮಸೀದಿ ಇಗರ್ಜಿಗಳು ಕೂಗಿ ಕರೆಯುತ್ತವೆ. ಇಂತಹ ಇಬ್ಬಂದಿಗಳೇ ರಾಜ್ಯವನ್ನು ಆಳುತ್ತಿದ್ದಾರೆ. ನ್ಯಾಯಾಲಯಗಳಲ್ಲಿ ಕುಳಿತು ನ್ಯಾಯ ವಿತರಣೆಯನ್ನು ಮಾಡುತ್ತಿದ್ದಾರೆ.

ನನ್ನ ಕವನ ಭ್ರಷ್ಟ ಬಿತ್ತನೆಯ ಕೊನೆಯ ಚರಣಗಳು ನೆನಪಾಗುತ್ತಿವೆ,

....
ಹಜಾರ್ ಹಜಾರ್
ಬಂದರೇನು ಹಜಾರೆ
ನಾವು ಭಾರತೀಯರೇ ಹೀಗೆ
ಮನೆಯೊಳಗೆ ಭ್ರಷ್ಟಾಚಾರ,
ಬೀದಿಯಲ್ಲದಕೆ,
ಧಿಕ್ಕಾರವೋ ಧಿಕ್ಕಾರ

ಮಾಡೋದೆಲ್ಲ ಮಾಡಿ
ಮಾಡ್ತೀವಿ........
ತಿರುಪ್ತೀಲಿ ಹರಕೆ
ಚರ್ಚಲ್ಲಿ ಕ್ಷಮಾಪಣೆ
ಮಸೀದಿಲಿ ನಮಾಜು
ಮೇರಾ ಭ್ರಷ್ಟ ಭಾರತ್
ಮಹಾನ್.....................

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ಹೆಚ್.ಕೆ.ರಾಜೇಶ್	– ಹುಳ್ಳೇನಹಳ್ಳಿ
ಶ್ರೀ.ಡಿ.ಸುದರ್ಶನ್	– ಹಾಸನ
ಶ್ರೀ.ಎ.ಆರ್.ಪ್ರಕಾಶ್	– ಮೈಸೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.


ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



ಶ್ರೀಮತಿ/ ಶ್ರೀ........

119 ನವೀನ.ಕೆ.ಸಿ
ಚಿಕ್ಕಮೋರಯ್ಯಗೌಡರವರ
ಪುತ್ರ,
ಹೆಬ್ಬಾಳು ಹೋಬಳಿ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ
ದೂರವಾಣಿ :
9164039719

Insufficient address
Not Known
Left India
Left without Instructions
Deceased
Refused
Unclaimed
Hence Returned to Sender

Postman / GDSMD

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at chandragiri printers, Mandya. Mob: 9945651584